11.00 A.M

2. ಶ್ರೀ ಎಂ.ಎಲ್. ಉಸ್ತಾದ್

ಮಾಜಿ ಸಚಿವರಾಗಿದ್ದ ಶ್ರೀ ಉಸ್ತಾದ್ ಮಹಬೂಬ್ ಪಟೇಲ್ ಲಾಡ್ಲೆ ಅವರು 1950ನೇ ಜೂನ್ 1 ರಂದು ಸಿಂಧಗಿ ತಾಲ್ಲೂಕಿನ ಕೊಂಡಗುಲಿ ಗ್ರಾಮದಲ್ಲಿ ಜನಿಸಿದ್ದು, ಕಲೆ ಹಾಗೂ ಕಾನೂನು ಪದವೀಧರರು. ವೃತ್ತಿಯಲ್ಲಿ ಕೃಷಿಕರು ಹಾಗೂ ನ್ಯಾಯವಾದಿಗಳಾಗಿದ್ದ ಶ್ರೀಯುತರು ಬಡವರ ಅಭಿವೃದ್ಧಿಯಲ್ಲಿ ತುಂಬಾ ಆಸಕ್ತಿ ಹೊಂದಿದ್ದು. ಬಿಜಾಪುರ ಕ್ಷೇತ್ರದಿಂದ ಎಂಟು, ಎಂಭತ್ತು ಹಾಗೂ ಹನ್ನೊಂದನೇ ವಿಧಾನಸಭೆಗೆ ಚುನಾಯಿತರಾಗಿದ್ದು, ಒಂಭತ್ತನೇ ವಿಧಾನಸಭೆ ಅವಧಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ 31.01.2007ರಂದು ನಿಧನ ಹೊಂದಿದರು.

3. ಶ್ರೀ ಬಳವಂತರಾವ್ ದೇವರಾವ್ ಪಟೇಲ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಳವಂತರಾವ್ ದೇವರಾವ್ ಪಟೇಲ್ ಅವರು 1918ರಲ್ಲಿ ಬೀದರ್ ಜಿಲ್ಲೆಯ ಖಾನಾಪುರದಲ್ಲಿ ಜನಿಸಿದ್ದು, ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಕಲೆ ಹಾಗೂ ಕಾನೂನು ಪದವಿಯನ್ನು ಪಡೆದಿದ್ದರು. ವಕೀಲಿ ವೃತ್ತಿಯನ್ನು ಮಾಡುತ್ತಿದ್ದ ಶ್ರೀಯುತರು ರಜಾಕರ ಕಾಲದಲ್ಲಿ ಪ್ರತಿಭಟನೆಯನ್ನು ನಡೆಸಿ ವೃತ್ತಿಯನ್ನು ಹಾಗೂ ರಾಜ್ಯವನ್ನು ತೊರೆದಿದ್ದರು. ಆನಂತರ ಮುನ್ಸಿಫ್ ನ್ಯಾಯಧೀಶರಾಗಿ ಕೆಲಕಾಲ ಕಾರ್ಯನಿರ್ವಹಿಸಿದ್ದ ಶ್ರೀಯುತರು ಸಾಮಾಜಿಕ ಸೇವೆಯಲ್ಲಿ ಆಸಕ್ತಿ ಹೊಂದಿ ವೃತ್ತಿಗೆ ರಾಜೀನಾಮೆ ಸಲ್ಲಿಸಿದ್ದರು. 1952ರಲ್ಲಿ ಬೀದರ್ ಪುರಸಭೆಯ ಸದಸ್ಯರಾಗಿ ಸೇವೆ ಸಲ್ಲಸಿದ್ದ ಶ್ರೀಯುತರು ಭಾಲ್ಕಿ ಕ್ಷೇತ್ರದಿಂದ ಎರಡನೇ ವಿಧಾನಸಭೆಗೆ ಚುನಾಯಿತರಾಗಿದ್ದರು.

ಶ್ರೀಯುತರು ದಿನಾಂಕ 25.11.2006ರಂದು ನಿಧನ ಹೊಂದಿದರು.

4. ಶ್ರೀ ಎಂ. ಬಸಪ್ಪ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ. ಬಸಪ್ಪ ಅವರು 1923ನೇ ಸೆಪ್ಟೆಂಬರ್ 13ರಂದು ಜನಿಸಿ, ಬಿಇ ಹಾಗೂ ಎಂಎಸ್‌ಸಿ (ಯುಎಸ್‌ಎ) ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಅಭಿಯಂತರರಾಗಿ ಸೇವೆ ಸಲ್ಲಿಸಿದ್ದರು ಸಮಾಜ ಸೇವೆಯಲ್ಲಿ ಆಸಕ್ತಿಯನ್ನು ಹೊಂದಿದ ಶ್ರಿಯುತರು 10ನೇ ವಿಧಾನಸಭೆಗೆ ಜಗಳೂರು

ಕ್ಷೇತ್ರದಿಂದ ಚುನಾಯಿತರಾಗಿದ್ದು, ಕರ್ನಾಟಕ ನಾರು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 03.12.2006ರಂದು ನಿಧನ ಹೊಂದಿದರು.

5. ಶ್ರೀ ಮಂಜಪ್ಪ ಉಳ್ಳಾಲ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಮಂಜಪ್ಪ ಉಳ್ಳಾಲ್ ಅವರು 1928ರಲ್ಲಿ ಮಂಗಳೂರು ಜಿಲ್ಲೆಯ ಉಳ್ಳಾಲದಲ್ಲಿ ಜನಿಸಿದ್ದರು. ಕ್ರೀಡಾಪಟುವಾಗಿದ್ದ ಶ್ರೀಯುತರು ಗ್ರಾಮಗಳಲ್ಲಿ ಶ್ರಮದಾನ ಚಳವಳಿಯನ್ನು ಪಸರಿಸಲು ಶ್ರಮಿಸಿದ್ದರು. ದಲಿತರ ಏಳಿಗೆಯ ಬಗ್ಗೆ ಅಪಾರ ಕಾಳಜಿ ಹೊಂದಿದ ಶ್ರೀಯುತರು ರಾಜ್ಯ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಕಾರ್ಯನೀತಿ ಸಮಿತಿ ಹಾಗೂ ಮಂಗಳೂರಿನ ಕರ್ನಾಟಕ ಪಾಲಿಟೆಕ್ನಿಕ್ ಸಂಸ್ಥೆಯ ಸದಸ್ಯರಾಗಿ, ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದು, ಕಾರ್ಕಳ ಕ್ಷೇತ್ರದಿಂದ ಎರಡನೇ ವಿಧಾನಸಭೆಗೆ ಅವಿರೋಧವಾಗಿ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 13.12.2006ರಂದು ನಿಧನ ಹೊಂದಿದರು.

6. ಶ್ರೀ ಡಿ. ಹಲಗೇಗೌಡ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಡಿ. ಹಲಗೇಗೌಡ ಅವರು 1934ನೇ ಮಾರ್ಚ್ 12ರಂದು ಪಾಂಡವಪುರ ತಾಲ್ಲೂಕು, ಅಮೃತಿಯಲ್ಲಿ ಜನಿಸಿದ್ದು, ಕಲಾ ಪದವೀಧರರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಸಮಾಜಸೇವೆಯಲ್ಲಿ ಆಸಕ್ತಿ ಹೊಂದಿದ್ದು, ಪಾಂಡವಪುರ ತಾಲ್ಲೂಕು ಬೋರ್ಡ್ ಸದಸ್ಯರಾಗಿ, ರಾಜ್ಯ ಸಹಕಾರ ಮಹಾಮಂಡಲ ಮತ್ತು ಪಾಂಡವಪುರ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾಗಿ, ಎಂ.ಡಿ.ಸಿ.ಸಿ. ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಐದು ಮತ್ತು ಒಂಭತ್ತನೇ ವಿಧಾನಸಭೆಗೆ ಪಾಂಡವಪುರ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 12.01.2007ರಂದು ನಿಧನ ಹೊಂದಿದರು.

ಶ್ರೀ.ಎಂ.ಪಿ.ಪ್ರಕಾಶ್ (ಗೃಹ, ಕಾನೂನು ಹಾಗೂ ಸಂಸದೀಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ತಾವು ಅಗಲಿಹೋದ ನಮ್ಮ ಸದಸ್ಯರ ಬಗ್ಗೆ ಸಂತಾಪ ಸೂಚನೆ ಗೊತ್ತುವಳಿಯನ್ನು ಮಂಡಿಸಿದ್ದೀರಿ. ಶ್ರೀ ವೈ. ರಾಮಚಂದ್ರರವರು, ಮಾನ್ಯ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಅವರು ಮಂತ್ರಿಗಳಾಗಿ ಕೆಲಸಮಾಡಿದಂತಹವರು. ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಬಹಳ

ಸಕ್ರಿಯವಾದಂತಹ ಪಾತ್ರವನ್ನು ವಹಿಸಿದಂತಹ ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿ ಹಿಂದುಳಿದ ಜನಾಂಗದ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿಕೊಂಡು ಅನೇಕ ಕೆಲಸಕಾರ್ಯಗಳನ್ನು ಮಾಡುವುದರ ಜೊತೆಗೆ ಕೊನೆಯವರೆವಿಗೂ ಕೂಡ ಸಂಸ್ಥಾ ಕಾಂಗ್ರೆಸ್ ಮತ್ತು ನಿಜಲಿಂಗಪ್ಪನವರ ಅನುಯಾಯಿಗಳಾಗಿ ಉಳಿದಿರತಕ್ಕಂತಹವರು. ಬಿಎಂಎಸ್ ಶಿಕ್ಷಣ ಸಂಸ್ಥೆಗೆ ಅದ್ಯಕ್ಷರಾಗಿ ಅಪಾರವಾದ ಸೇವೆಯನ್ನು ಮಾಡಿದಂತಹ ಮಾನ್ಯ ವೈ ರಾಮಚಂದ್ರರವರು ಬೆಂಗಳೂರು ನಗರದಲ್ಲಿ ಬಹಳ ಜನಪ್ರಿಯರಾದ ವ್ಯಕ್ತಿಗಳಾಗಿ ಅನೇಕ ಸಂಘಸಂಸ್ಥೆಗಳೊಡನೆ ಗುರುತಿಸಿಕೊಂಡಂತಹವರಾಗಿದ್ದರು. ಪ್ರಾಯಶ: ಜಿ.ನಾರಾಯಣರವರ, ನಿಟ್ಟೂರು ಶ್ರೀನಿವಾಸರಾಯರ ಮತ್ತು ಆ ಕಾಲದ ಎಲ್ಲಾ ಹಿರಿಯ ಮುತ್ಸದ್ದಿಗಳಾದವರು ಹಾಗೂ ಅ.ನ.ಕೃಷ್ಣರಾಯರ ಹೀಗೆ ಮೊದಲಾದ ಸಾಹಿತ್ಯ ಪ್ರೇಮಿಗಳ ಮತ್ತು ಸ್ನೇಹಿತರ ಜೊತೆಗೂ ನಿಕಟವಾದಂತಹ ಸಂಬಂಧವನ್ನು ವೈ. ರಾಮಚಂದ್ರರವರು ಇಟ್ಟುಕೊಂಡಿದ್ದರು. ನಮ್ಮ ಪಕ್ಷದಲ್ಲಿ ಬಹಳ ಉನ್ನತಮಟ್ಟದ ನಾಯಕರಾಗಿ ಅನೇಕ ಸಂದರ್ಭದಲ್ಲಿ ನಮಗೆ ಮಾರ್ಗದರ್ಶನ ಮಾಡಿದಂತಹವರಾಗಿದ್ದರು. ಅದೇ ರೀತಿಯಾಗಿ ಶ್ರೀ ಎಂ.ಎಲ್.ಉಸ್ತಾದ್‌ರವರು ಬಹಳ ಚಿಕ್ಕ ವಯಸ್ಸಿನವರು. ಅವರು ಮಂತ್ರಿಗಳಾಗಿ ಕೆಲಸ ಮಾಡುವ ಹಾಗೂ ವಿವಿಧ ಸಮಿತಿಗಳಲ್ಲಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ನಾನು ಅವರೊಡನೆ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡಿದ್ದೆ. ಬಹಳ ಹಾಸ್ಯಪ್ರಿಯರಾಗಿದ್ದರು, ಬಿಜಾಪುರದ ಅನೇಕ ಸಮಸ್ಯೆಗಳು ಅದರಲ್ಲೂ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಬಹಳ ಹೋರಾಟವನ್ನು ಮಾಡಿ. ಆ ಕುಡಿಯುವ ನೀರಿನ ಸಮಸ್ಯೆಯನ್ನು ಸುಧಾರಿಸುವುದಕ್ಕೆ ಬಹಳ ಕೆಲಸ ಮಾಡಿದತಂಹ ಚಿಕ್ಕ ವಯಸ್ಸಿನವರಾದ ಉಸ್ತಾದ್ ಮಹಬೂಬ್ ಪಟೇಲ್‌ರವರು ಅಕಾಲಿಕ ಹೃದಯಘಾತಕ್ಕೆ ಒಳಗಾಗಿ ಬೆಂಗಳೂರಿನಲ್ಲಿ ನಿಧನರಾದದ್ದು ನಿಜಕ್ಕೂ ಶೋಚನಿಯವಾದ ವಿಚಾರ. ಶ್ರೀ ಬಳವಂತರಾವ್ ದೇವರಾವ್ ಪಟೇಲ್‌ರವರು ನನಗೆ ಹೆಚ್ಚಿನ ಪರಿಚಯವಿಲ್ಲದಿರುವವರು. ಇವರು ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ ಎರಡು ಸಾರಿ ಗೆದ್ದು ಬಂದಿರುವುದರಿಂದ ವಿರೋಧಪಕ್ಷದ ನಾಯಕರಾದ ಮಾನ್ಯ ಧರ್ಮ್‌ಸಿಂಗ್‌ರವರಿಗೆ, ಮಲ್ಲಿಕಾರ್ಜುನ ಖರ್ಗೆಯವರಿಗೆ ಚೆನ್ನಾಗಿ ಗೊತ್ತಿರತಕ್ಕಂತಹವರು. ಅದೇ ರೀತಿಯಲ್ಲಿ ಶ್ರೀ ಮಂಜಪ್ಪ ಉಳ್ಳಾಲ್‌ರವರು, ಶ್ರೀ ಡಿ. ಹಲಗೇಗೌಡರವರು ಇವರೆಲ್ಲರೂ ಸಮಾಜ ಸೇವೆಯಲ್ಲಿ ಕೆಲಸ ಮಾಡಿದವರು. ಆದರೆ ಇವರುಗಳು ನನಗೆ ಅಂತಹ ದೊಡ್ಡ

ಪರಿಚಯವಿಲ್ಲದವರಾಗಿದ್ದರು ಕೂಡ ಹಲಗೇಗೌಡರು ಮಂಡ್ಯದ ಸಕ್ಕರೆ ಕಾರ್ಖಾನೆಯ ಬಗ್ಗೆ ಹಾಗೂ ಮಂಡ್ಯ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿ ಮಾಡಿದ ಸೇವೆಯ ಬಗ್ಗೆ ಹಾಗು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಮಾಡಿದ ಕೆಲಸಗಳ ಬಗ್ಗೆ ಅನೇಕ ವಿಷಯಗಳು ನಮಗೆ ಗೊತ್ತಿದ್ದಂತಹ ಅನೇಕ ಸಂದರ್ಭ ಇದ್ದುದ್ದರಿಂದ ಪ್ರಾಯಶ: ಹಲಗೇಗೌಡರನ್ನು ವೈಯಕ್ತಿಕವಾಗಿ ನಾನು ಬಲ್ಲವನಾಗಿದ್ದೆ. ಶ್ರೀ ಎಂ.ಬಸಪ್ಪನವರು, ನಮ್ಮ ಜಗಳೂರು ಕ್ಷೇತ್ರದ ಶಾಸಕರಾಗಿ ಕೆಲಸ ಮಾಡಿದಂತಹವರು. ಪ್ರಥಮಭಾರಿಗೆ ಅವರಿಗೆ ಟಿಕೆಟ್ ಕೊಟ್ಟಂತಹ ಸಂದರ್ಭದಲ್ಲಿ ಅವರು ಸೋತಿದ್ದರು. ಅವರು ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಅಭಿಯಂತರರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ನಂತರ ಸಕ್ರಿಯವಾದ ರಾಜಕಾರಣದಲ್ಲಿ ಪಾಲ್ಗೊಂಡು ಅವರು ನಮ್ಮ ಜೊತೆಗೆ, ನಮ್ಮ ಪಕ್ಷದ ವತಿಯಿಂದ ವಿಧಾನ ಸಭೆಗೆ ಜಗಳೂರು ಕ್ಷೇತ್ರದಿಂದ ಆಯ್ಕೆಯಾದಂತಹವರಾಗಿದ್ದರು. ಈ ಎಲ್ಲಾ ಮಹನೀಯರುಗಳ ನಿಧನದಿಂದ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡತಕ್ಕಂತಹ ಹಿರಿಯ ಜೀವಿಗಳು ಕಣ್ಮರೆಯಾದಂತಾಗಿದೆ. ಆ ಕಾಲಕ್ಕೆ ಈ ಎಲ್ಲಾ ವ್ಯಕ್ತಿಗಳು ಕೂಡ ಒಂದು ಉತ್ತಮವಾದ ಸಿದ್ಧಾಂತ ತತ್ವಗಳಿಗೆ ಬದ್ಧರಾಗಿ ಎಲೆಮರೆಯ ಕಾಯಿಯಂತೆ ತಮ್ಮ ಕೆಲಸವನ್ನು ಮಾಡಿ, ತಮ್ಮ ಅವಧಿ ಮೀರಿದ ನಂತರ ಅಥವಾ ತಾವು ಸದಸ್ಯರಲ್ಲದ ಸಂದರ್ಭದಲ್ಲಿಯು ಕೂಡ ತಮ್ಮ ಇತಿಮಿತಿಯಲ್ಲಿ ಹಾಗು ತಮ್ಮ ಆರೋಗ್ಯ ಸ್ಥಿತಿಗೆ ಅನುಗುಣವಾದಂತಹ ರೀತಿಯಲ್ಲಿ ತಮ್ಮ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡಿದ ಮಹನೀಯರುಗಳಾಗಿದ್ದಾರೆ. ಅವರೆಲ್ಲರಿಗೂ ಕೂಡ ಸದನ ಸಂತಾಪ ವ್ಯಕ್ತಪಡಿಸುವುದು ಆದ್ಯಕರ್ತವ್ಯವಾಗಿದೆ. ಆದುದರಿಂದ ತಾವೇನು ಸಂತಾಪ ಸೂಚನೆಯನ್ನು ತಂದಿದ್ದೀರಿ ಇದಕ್ಕೆ ಇಡೀ ಸದನದ ಸಂಪೂರ್ಣವಾದ ಸಹಮತವಿದೆ ಎಂದು ಹೇಳಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಕುಟುಂಬವರ್ಗಕ್ಕೆ ಸಾಂತ್ವನ ಹೇಳುವಂತಹ ನಮ್ಮ ಗೊತ್ತುವಳಿಯನ್ನು ಅವರಿಗೆ ಕಳುಹಿಸಿ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಈಶ್ವರಪ್ಪನವರ ಕೈ ಮುರಿದಿದೆ, ಪಾರ್ಟಿ ಮೀಟಿಂಗ್‌ನಲ್ಲಿ ಏನು ಕುಸ್ತಿ ಆಯಿತೋ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ: ಸಂತಾಪ ಸೂಚನೆ ಆದ ನಂತರ ಹೇಳುತ್ತೇನೆ.

ಶ್ರೀ ಎನ್. ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೇ, ಶ್ರೀ ವೈ.ರಾಮಚಂದ್ರರವರು ಈ ನಾಡಿನ ಒಬ್ಬ ಹಿರಿಯ ನಾಯಕರಾಗಿದ್ದವರು. ಮಹಾ ಪೌರರಾಗಿದ್ದವರು. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಇವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಮಾನ್ಯ ದಿವಂಗತ ದೇವರಾಜರಸ್‌ರವರು ಕರ್ನಾಟಕದಲ್ಲಿ ಹಾವನೂರು ಆಯೋಗವನ್ನು ರಚನೆ ಮಾಡಿದರು ಆ ಆಯೋಗದಲ್ಲಿ ನಾನು ಅವರು ಜೊತೆಯಲ್ಲಿ ಕೆಲಸ ಮಾಡಿದ್ದೇವೆ. ಶ್ರೀ ವೈ. ರಾಮಚಂದ್ರರವರು ಹಿಂದುಳಿದ ವರ್ಗಗಳ ಬಗ್ಗೆ ಹೆಚ್ಚಿನ ಕಳಕಳಿ ಇಟ್ಟುಕೊಂಡಿದ್ದರು. ಹಾವನೂರು ಆಯೋಗ ಈ ರಾಜ್ಯದ ಹಿಂದುಳಿದ ವರ್ಗಗಳ ಜನರಿಗೆ ಬೈಬಲ್ ಎಂದು ಎಲ್ಲ ಜನರು ಮಾತನಾಡುತ್ತಿದ್ದಾರೆ. ಇದಕ್ಕೆ ಹೆಚ್ಚಿನ contribution ಕೊಟ್ಟು ಅವರು ಸಾಕಷ್ಟು ಸಹಾಯ ಮಾಡಿದ್ದಾರೆ. ಅವರ ಅಗಲಿಕೆಯಿಂದ ನಮಗೆ ಮತ್ತು ವಿಶೇಷವಾಗಿ ಹಿಂದುಳಿದ ವರ್ಗದವರಿಗೆ ಹೆಚ್ಚಿನ ಹಾನಿ ಆಗಿದೆ ಎನ್ನತಕ್ಕಂತಹ ಮಾತನ್ನು ನಾನು ಕೂಡ ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಉಸ್ತಾದ್‌ರವರು ನಿನ್ನೆ 11.00 ಗಂಟೆಗೆ ಅವರ ಮನೆಯಲ್ಲಿ ಉಪಹಾರ ಸೇವಿಸಿ ವಾಶ್ ಬೇಸಿನ್‌ನಲ್ಲಿ ಕೈ ತೊಳೆಯುವಂತಹ ಸಂದರ್ಭದಲ್ಲಿ ಅವರು ಹೃದಯಾಘಾತದಿಂದ ತೀರಿಕೊಂಡಿದ್ದಾರೆ. ನಾನು ಮತ್ತು ನಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು ಹೋಗಿದ್ದೆವು. ಮಾನ್ಯ ಉಸ್ತಾದ್‌ರವರು ನಮ್ಮ ನೆರೆ ಜಿಲ್ಲೆಯಾದ ಬಿಜಾಪುರ ಜಿಲ್ಲೆಯವರು. ಅವರು ವಿಧಾನಸಭೆಗೆ ಮೂರು ಬಾರಿ ಆರಿಸಿ ಬಂದಿದ್ದಾರೆ. ಅಲ್ಪಸಂಖ್ಯಾತರಾಗಿ ಹುಟ್ಟಿ, ಕೇವಲ ಅಲ್ಪಸಂಖ್ಯಾತರಾಗಿ ನಾಯಕರಾಗಿರದೆ ಆ ಭಾಗದಲ್ಲಿನ ಎಲ್ಲ ಕೋಮಿನ ಜನರ ಪ್ರೀತಿಗೆ ಪಾತ್ರರಾದ ಒಳ್ಳೆಯ ಕಾರ್ಯಕರ್ತರಾಗಿದ್ದರು. ಅವರ ಅಗಲಿಕೆಯಿಂದ ಉತ್ತರ ಕರ್ನಾಟಕ ಭಾಗಕ್ಕೆ ಹೆಚ್ಚಿನ ಅನ್ಯಾಯವಾಗಿದೆ. ಇವತ್ತಿನದಿವಸ ಅವರ ಅಂತ್ಯಕ್ರಿಯೆ ಕೂಡ ನಡೆಯುತ್ತಿದೆ. ನಮ್ಮ ಜೊತೆಯಲ್ಲಿ ಅವರು ಸದನದಲ್ಲಿದ್ದರು. ಮಂತ್ರಿಗಳಾಗಿ ಎರಡು ಸಲ ಕೆಲಸ ಮಾಡಿದ್ದಾರೆ. ಬಹಳ ಸೌಮ್ಯ ಸ್ವಭಾವದವರು. ಅವರ ಅಗಲಿಕೆಯಿಂದ ಇವತ್ತು ಬಿಜಾಪುರ ಜಿಲ್ಲೆ ಮತ್ತು ಆ ಭಾಗದಲ್ಲಿರತಕ್ಕಂತಹ ಎಲ್ಲ ಜನರು ಕೂಡ ದಿಗ್ಭ್ರಮೆಗೆ ಒಳಗಾಗಿದ್ದಾರೆ. ಅವರ ಪರಿವಾರದವರಿಗೆ ಈ ಒಂದು ದೊಡ್ಡ ಹಾನಿ ಏನಾಗಿದೆ ಅದನ್ನು ಸಹನೆ ಮಾಡತಕ್ಕಂತಹ ಶಕ್ತಿ ಕೊಟ್ಟು ದೇವರು ಅವರ ಮೇಲೆ ದಯೆ ತೋರಿಸಲಿ ಎಂದು ಕೇಳಿಕೊಳ್ಳುತ್ತೇನೆ. ಶ್ರೀ ಬಳವಂತರಾವ್ ದೇವರಾವ್

ಪಟೇಲ್, ಶ್ರೀ ಎಂ. ಬಸಪ್ಪ, ಶ್ರೀ ಮಂಜಪ್ಪ ಉಳ್ಳಾಲ್, ಇವರ ಪೈಕಿ ಶ್ರೀ ಹಲಗೇಗೌಡರು ನಮ್ಮ ಜೊತೆ ಶಾಸಕರಾಗಿದ್ದವರು. ಮಂಡ್ಯ ಜಿಲ್ಲೆಯಿಂದ ಬಂದಂತಹ ಹಲಗೇಗೌಡರು ನಾವೂ ಜೊತೆಗೂಡಿ ಕೆಲಸ ಮಾಡಿದ್ದೇವೆ. ಇವರು ಸಹಕಾರ ಕ್ಷೇತ್ರದಲ್ಲಿ ಕೂಡ ಸಾಕಷ್ಟು ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ ಮತ್ತು ಕರ್ನಾಟಕದ ಜನತೆಗೆ ವಿಶೇಷವಾಗಿ ಪಾಂಡವಪುರ ಕ್ಷೇತ್ರದಿಂದ ಅವರು ಆರಿಸಿ ಬಂದಿದ್ದಾರೆ. ಇವರ ನಿಧನದಿಂದ ಮಂಡ್ಯ ಜಿಲ್ಲೆಗೆ ಆದಂತಹ ಆಘಾತಕ್ಕೆ ನಾನೂ ಕೂಡ ಧ್ವನಿಗೂಡಿಸುತ್ತಿದ್ದೇನೆ. ತಾವು ಸದನದಲ್ಲಿ ಏನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ನಾನು ಪೂರ್ಣವಾದ ಬೆಂಬಲವನ್ನು ಸೂಚಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಈ ಸದನದಲ್ಲಿ ಸಂತಾಪ ಸೂಚನಾ ನಿರ್ಣಯವನ್ನು ಏನು ಮಂಡನೆ ಮಾಡಿದ್ದೀರಿ ಅದಕ್ಕೆ ಬೆಂಬಲವನ್ನು ಸೂಚಿಸುತ್ತೇನೆ. ದಿವಂಗತ ವೈ.ರಾಮಚಂದ್ರರವರು ನಾನು ಮೊದಲನೆಯ ಬಾರಿ ವಿಧಾನ ಸಭೆಗೆ ಆರಿಸಿ ಬಂದಾಗ ಅವರ ಬಗ್ಗೆ ಸಾಕಷ್ಟು ವಿಚಾರಗಳನ್ನು ಕೇಳಿದ್ದೆ. ಬರೀ ಹಿಂದುಳಿದ ವರ್ಗದವರು, ದಲಿತರು, ಅವರ ಉದ್ಧಾರ ಎನ್ನುವಂತಹ ಭಾಷಣಗಳನ್ನು ಕೇಳುತ್ತಿರುವಂತಹ ಸಂದರ್ಭದಲ್ಲಿ, ಕನಕದಾಸರ ಸಿದ್ಧಾಂತವನ್ನು ರಾಜ್ಯದ ಜನತೆಗೆ ಮುಟ್ಟಿಸುವ ದಿಕ್ಕಿನಲ್ಲಿ ಅವರು ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಮತ್ತು ಮಂತ್ರಿಯಾಗದಿದ್ದಂತಹ ಸಂದರ್ಭದಲ್ಲಿಯೂ ಕೂಡ ಸಾಕಷ್ಟು ಪ್ರಯತ್ನವನ್ನು ಮಾಡಿದಂತಹ ಒಬ್ಬ ವ್ಯಕ್ತಿ ಎನ್ನುವಂತಹ ಮಾತನ್ನು ಕೇಳಿ ನಿಜಕ್ಕೂ ನನಗೆ ಬಹಳಷ್ಟು ಸಂತೋಷವೂ ಕೂಡ ಆಗಿತ್ತು. ಅಂತಹ ವೈ.ರಾಮಚಂದ್ರರವರು ಇವತ್ತು ನಮ್ಮ ಜೊತೆ ಇಲ್ಲ. ಆದರೆ ಅವರು ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿಗೂ ಕೂಡ ಸಾಕಷ್ಟು ಪ್ರಯತ್ನವನ್ನು ಮಾಡಿದ್ದೂ ಕೂಡ ನಾನು ಕೇಳಿದ್ದೇನೆ. ಹೀಗಾಗಿ, ಅಂತಹ ಒಬ್ಬ ಆದರ್ಶ ವ್ಯಕ್ತಿ ಇವತ್ತು ನಮ್ಮನ್ನು ಬಿಟ್ಟು ಅಗಲಿರುವುದು ನಿಜಕ್ಕೂ ನಮಗೆಲ್ಲರಿಗೂ ಕೂಡ ನೋವು ತಂದಿದೆ. ನಾನು ಶಾಸಕನಾಗಿರುವಂತಹ ಸಂದರ್ಭದಲ್ಲಿ ಶ್ರೀಯುತ ಎಂ.ಎಲ್.ಉಸ್ತಾದ್‌ರವರು ಮಂತ್ರಿಗಳಾಗಿ ಸಾಕಷ್ಟು ಸೇವೆಯನ್ನು ಈ ರಾಜ್ಯದ ಜನತೆಗೆ ಮಾಡಿದ್ದಾರೆ. ಜೊತೆಗೆ ಶ್ರೀಯುತ ಬಳವಂತರಾವ್ ದೇವರಾವ್ ಪಟೇಲ್‌ರವರೂ ಕೂಡ ಇಂದು ನಿಧನರಾಗಿದ್ದಾರೆ. ಅವರ ಬಗ್ಗೆ ನನಗೆ ಗೊತ್ತಿಲ್ಲದಿದ್ದರೂ ನಾನು ಸಾಕಷ್ಟು ತಿಳಿದುಕೊಂಡಿದ್ದೇನೆ. ಅವರೂ ಕೂಡ ಇಂದು ನಮ್ಮ ಜೊತೆಯಲ್ಲಿಲ್ಲ. ಹಿರಿಯರಾದ ಶ್ರೀಯುತ

ಎಂ.ಬಸಪ್ಪನವರು ಅವರಿಗೆ ವಯಸ್ಸಾಗಿದ್ದರೂ ಕೂಡ ಅವರು ತಮ್ಮ ಕ್ಷೇತ್ರದ ಬಗ್ಗೆ ವಿಧಾನ ಸಭೆಯಲ್ಲಿ ಮಾಡುತ್ತಿದ್ದಂತಹ ಪ್ರಯತ್ನ ನಿಜವಾಗಿಯೂ ನಮಗೆಲ್ಲರಿಗೂ ದಾರಿ ತೋರಿಸುವ ಹಾಗಿತ್ತು. ಈ ರೀತಿ ಕೆಲಸ ಮಾಡಬೇಕೆಂದು ಅವರು ಮಾಡಿದ ಪ್ರಯತ್ನ ಮಾದರಿಯಾಗಿತ್ತು. ಅವರು ಅವರ ಇಳಿ ವಯಸ್ಸಿನಲ್ಲಿ ಕೂಡ ಪ್ರಯತ್ನ ಮಾಡುತ್ತಿದ್ದರು. ಅಂತಹ ಬಸಪ್ಪನವರು ಕೂಡ ಇವತ್ತು ನಮ್ಮಿಂದ ಅಗಲಿದ್ದಾರೆ. ಅದೇ ರೀತಿಯಲ್ಲಿ ಶ್ರೀಯುತ ಮಂಜಪ್ಪ ಉಳ್ಳಾಲ್‌ರವರು ಮತ್ತು ಹಲಗೇಗೌಡರು ಕೂಡ ಇಂದು ನಮ್ಮ ಜೊತೆಯಲ್ಲಿಲ್ಲ. ಹಲಗೇಗೌಡರು ಕೂಡ ಈ ಶಾಸನ ಸಭೆಯಲ್ಲಿ ಸಾಕಷ್ಟು ಪ್ರಯತ್ನ ಮಾಡಿ ರೈತರ ಪರವಾಗಿ ಅವರು ಹೋರಾಟ ಮಾಡಿರುವುದನ್ನು ನಾವು ನೋಡಿದ್ದೇವೆ. ಇವತ್ತು ಏನು ಹಿರಿಯರು ನಿಧನರಾಗಿದ್ದಾರೆ, ಅವರು ಅವರ ಜೀವನದಲ್ಲಿ ಯಾವ ಒಳ್ಳೆಯ ಕೆಲಸಗಳನ್ನು ಮಾಡಿದ್ದರು ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಹ ಪ್ರಯತ್ನ ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೂ ಕೂಡ ದು:ಖವನ್ನು ಭರಿಸುವಂತಹ ಶಕ್ತಿಯನ್ನು ಪರಮಾತ್ಮ ಕೊಡಲಿ ಎಂದು ಹೇಳಿ ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ನಾನು ಶ್ರದ್ಧಾಂಜಲಿಯನ್ನು ಅರ್ಪಿಸುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿದಂತಹ ಸಂತಾಪ ಸೂಚನೆಗೆ ನಾನು ಬೆಂಬಲಿಸುತ್ತಾ, ಶ್ರೀ ವೈ. ರಾಮಚಂದ್ರರವರು ಅತ್ಯಂತ ಪ್ರಭಾವಿ ಹಿಂದುಳಿದ ವರ್ಗಗಳ ನಾಯಕರು ಮತ್ತು ವಿಶೇಷವಾಗಿ ಅವರು ಹಾವನೂರು ಕಮಿಷನ್‌ನಲ್ಲಿ ಸದಸ್ಯರಾಗಿ ಕೆಲಸ ಮಾಡಿದಂತಹವರು. ಶಿಕ್ಷಣ ಕ್ಷೇತ್ರದಲ್ಲಿ ಅವರು ತಮ್ಮದೇ ಆದ ಕೊಡುಗೆಯನ್ನು ಬೆಂಗಳೂರು ನಗರದಲ್ಲಿ ಕೊಟ್ಟಿರತಕ್ಕಂಥದ್ದು, ಮತ್ತು ಮೇಯರ್ ಆಗಿ ಕೂಡ ಅವರು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅಂತಹ ಒಬ್ಬ ಧೀಮಂತ ವ್ಯಕ್ತಿ ನಮ್ಮಿಂದ ಅಗಲಿ ಹೋಗಿದ್ದಾರೆ. ಅದಕ್ಕಾಗಿ ನಾನು ಅವರಿಗೆ ತುಂಬು ಹೃದಯದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ.ಎರಡನೆಯದಾಗಿ ಶ್ರೀ ಎಂ.ಎಲ್. ಉಸ್ತಾದ್‌ರವರು ಇವರು ನಮ್ಮ ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನವರು. ಇವರೂ ಕೂಡ ಸುಮಾರು ಮೂರು ಸಾರಿ ನಮ್ಮ ಜೊತೆಯಲ್ಲಿ ಈ ಶಾಸನಸಭೆಯಲ್ಲಿ ಶಾಸಕರಾಗಿದ್ದರು. ಎರಡು ಸಲ ನಮ್ಮ ಜೊತೆಯಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅಂತಹ ಒಬ್ಬ ವ್ಯಕ್ತಿ ನಗು ನಗುತ್ತಾ ಅವರು ಅವರ ಮನೆಯ ಮುಂದೆ ವಾಕ್ ಮಾಡುವಾಗ 10 ಗಂಟೆಗೆ ಹಾರ್ಟ್ ಅಟ್ಯಾಕ್

ಆಗಿ ಅರ್ದ ಗಂಟೆಯಲ್ಲಿ ಕೊನೆಯುಸಿರೆಳೆದರು. 11.00 ಗಂಟೆಗೆ ಅವರಿಗೆ ಆಸ್ಪತ್ರೆಗೆ ತೆಗೆದುಕೊಂಡು ಹೋದರೆ ಆಗಲೇ ಡಿಕ್ಲೇರ್ ಆಗಿತ್ತು. ಈಗಾಗಲೇ ಅವರು ಹೃದಯಾಘಾತದಿಂದ ತೀರಿಕೊಂಡಿದ್ದಾರೆ, ಅವರನ್ನು ಆಸ್ಪತ್ರೆಗೆ ತರತಕ್ಕಂತಹ ಅವಶ್ಯಕತೆ ಇಲ್ಲವೆಂದು ಡಾಕ್ಟರ್ ಹೇಳಿದರು. ಪ್ರಿಮೆಚ್ಯೂರ್ ಡೆತ್. ಸಹಜವಾಗಿ ವಯಸ್ಸಾಗಿ ಸತ್ತರೆ ಮನುಷ್ಯನಿಗೆ ಅಷ್ಟು ದು:ಖವಾಗುವುದಿಲ್ಲ. ಪ್ರಿ ಮೆಚ್ಯೂರ್ ಡೆತ್ ಅಂದಾಗ ನ್ಯಾಚುರಲಿ ಒಬ್ಬ ಮನುಷ್ಯ ಬದುಕತಕ್ಕಂತಹವನು ಮತ್ತು ಎಲ್ಲರ ಜೊತೆಯಲ್ಲಿ ಬೆರೆಯುವುದು ಮತ್ತು ಯಾವಾಗಲೂ ಹಸನ್ಮುಖಿಯಾಗಿದ್ದಂತಹ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಇವತ್ತು ಮಧ್ಯಾಹ್ನದ ಮೇಲೆ ಬಿಜಾಪುರದಲ್ಲಿ ಅವರ ಅಂತ್ಯ ಕ್ರಿಯೆ ಆಗುತ್ತಿದೆ. ಅದಕ್ಕಾಗಿ ಈ ಸದನದ ಮುಖಾಂತರ ಅವರ ಕುಟುಂಬಕ್ಕೆ ಏನು ದೊಡ್ಡ ಹಾನಿಯಾಗಿದೆ ಆ ಹಾನಿಯನ್ನು ತುಂಬತಕ್ಕಂತಹ ಮತ್ತು ದು:ಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ಹೇಳಿ ಈ ಸಂದರ್ಭದಲ್ಲಿ ಆಶಿಸುತ್ತೇನೆ. ಬಳವಂತರಾವ್‌ರವರೂ ಕೂಡ ನಮ್ಮ ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನವರು. 1957ರಲ್ಲಿ ಇವರು MES ನಿಂದ ಆರಿಸಿ ಬಂದಂತಹ ಒಬ್ಬ ವ್ಯಕ್ತಿ. ಅವರ ಜೊತೆ ಜೊತೆಯಲ್ಲೇ ಒಬ್ಬರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಧೀಮಂತ ನಾಯಕರಾದ ಶ್ರೀ ಶಾಮಸುಂದರ್‌ರವರು ಕೂಡ ಆ ಸಾರಿ ಅನ್ ಅಪೋಸ್ಡ್ ಆಗಿ ಆರಿಸಿ ಬಂದಿದ್ದರು. ಅಂತಹ ಕೆಲವು ವ್ಯಕ್ತಿಗಳು ಇಂದು ನಮ್ಮಿಂದ ಅಗಲಿ ಹೋಗಿದ್ದಾರೆ. ಯಾರು ಈ ಸಮಾಜಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿ, ತಮ್ಮದೇ ಆದ ಕೊಡುಗೆಯನ್ನು ಕೊಟ್ಟಂತಹ ಮಹನೀಯರು, ಹಾಗೆಯೇ ಶ್ರೀ ಎಂ. ಬಸಪ್ಪನವರು ಕೂಡ ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು. ಅವರೂ ಕೂಡ PWDಯಲ್ಲಿ ಚೀಫ್ ಇಂಜಿನಿಯರ್ ಆಗಿ ಕೆಲಸ ಮಾಡಿ ರಿಟೈರ್ಡ್ ಆಗಿ ಕೂಡ ಪುನ: ಬಂಗಾರಪ್ಪನವರ ಪಕ್ಷದಿಂದ ಶಾಸಕರಾಗಿ ಕಡೆಗೆ ಕಾಂಗ್ರೆಸ್ ಪಕ್ಷಕ್ಕೆ ಸೇರಿ ಕೆಲಸವನ್ನು ಮಾಡಿದ್ದರು. ಅಂಥ ಒಬ್ಬ ಹಿರಿಯ ನಾಯಕರು ನಮ್ಮನ್ನು ಅಗಲಿದ್ದಾರೆ. ಇವರುಗಳಲ್ಲದೇ ಶ್ರೀ ಮಂಜಪ್ಪ ಉಳ್ಳಾಲ್‌ರವರೂ ಕೂಡ ನಮ್ಮನ್ನು ಅಗಲಿದ್ದಾರೆ. ಅವರೂ ಕೂಡ ಉತ್ತಮ ಶಾಸಕರಾಗಿದ್ದರು. ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದಂಥ ವ್ಯಕ್ತಿಯಾಗಿದ್ದರು. ಶ್ರೀ ಡಿ. ಹಲಗೇಗೌಡರೂ ಕೂಡ ಈ ಸದನದ ಸದಸ್ಯರಾಗಿದ್ದರು. ತಮಗೂ ಕೂಡ ಗೊತ್ತಿದೆ, ಇವರು ಸಹಕಾರಿ ರಂಗದಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದಂಥ

ವ್ಯಕ್ತಿಯಾಗಿದ್ದರು. ಇವರಿಗೆ ಯಾವುದೇ ಒಂದು ಗಿಜಿಗಿಜಿಯ ರಾಜಕಾರಣದಲ್ಲಿ ಆಸಕ್ತಿ ಇರಲಿಲ್ಲ. ಸರಳ ಜೀವಿಯಾಗಿದ್ದರು ಮತ್ತು ರೈತರ ಬಗ್ಗೆ ಹೆಚ್ಚಿನ ಕಾಳಜಿಯನ್ನು ಹೊಂದಿದ್ದಂಥ ಇವರು ಕೂಡ ನಮ್ಮಿಂದ ಅಗಲಿದ್ದಾರೆ. ಇವರೆಲ್ಲರಿಗೂ ಕೂಡ ನನ್ನ ತುಂಬು ಹೃದಯದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ):–ಮಾನ್ಯ ಅಧ್ಯಕ್ಷರೆ, ತಾವು ಇಲ್ಲಿ ತಂದಿರುವ ಸಂತಾಪ ಸೂಚನೆಗೆ ನಾನೂ ಕೂಡ ನನ್ನ ಹಾಗೂ ನನ್ನ ಪಕ್ಷದ ಬೆಂಬಲವನ್ನು ವ್ಯಕ್ತಪಡಿಸುತ್ತಾ ಮಾನ್ಯ ರಾಮಚಂದ್ರರವರು, ಮಾನ್ಯ ಉಸ್ತಾದ್‌ರವರು, ಮಾನ್ಯ ಬಳವಂತರಾವ್ ದೇವರಾಯ್ ಪಟೇಲ್‌ರವರು, ಮಾನ್ಯ ಬಸಪ್ಪನವರು, ಮಾನ್ಯ ಮಂಜಪ್ಪ ಉಳ್ಳಾಲ್‌ರವರು, ಮಾನ್ಯ ಹಲಗೇಗೌಡರು, ಇವರುಗಳೆಲ್ಲಾ ನಿಧನ ಹೊಂದಿರುವುದಕ್ಕೆ ನನ್ನ ಸಂತಾಪವನ್ನು ಸೂಚಿಸಿ, ಅವರ ಕುಟುಂಬದ ಸದಸ್ಯರಿಗೆ ದು:ಖವನ್ನು ಭರಿಸುವಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಮಾನ್ಯ ಉಸ್ತಾದ್‌ರವರು ಮತ್ತು ಮಾನ್ಯ ಬಸಪ್ಪನವರು, ನಾವೆಲ್ಲಾ ಶಾಸಕರಾಗಿ ಬಂದಾಗ ಈ ಸಭೆಯ ಸದಸ್ಯರಾಗಿದ್ದರು. ಮಾನ್ಯ ಬಸಪ್ಪನವರು ಸ್ನಾತಕೋತ್ತರ ಇಂಜಿನಿಯರಿಂಗ್ ಪದವೀಧರರಾಗಿದ್ದರು ಎಂದರೆ ಅವರನ್ನು ನೋಡಿದರೆ ಆ ರೀತಿ ಅನ್ನಿಸುತ್ತಿರಲಿಲ್ಲ. ಅವರು ಒಂದು ದಿವಸ ಈ ಅಸೆಂಬ್ಲಿಯಲ್ಲಿ ನಿಂತುಕೊಂಡು ಪಿಡಬ್ಲ್ಯೂಡಿ ಇಲಾಖೆ ಬಗ್ಗೆ ಮಾತನಾಡುವಾಗ ನಾವೆಲ್ಲಾ ತಿರುಗಿ ಅವರ ಕಡೆಗೆ ನೋಡಿದೆವು, ಮಾನ್ಯ ಬಸಪ್ಪನವರು ಇಷ್ಟೊಂದು ಚೆನ್ನಾಗಿ ಮಾತನಾಡುತ್ತಿದ್ದಾರೆ ಎಂದು ತಿರುಗಿ ನೋಡಿದೆವು. ಆಗಲೇ ನನಗೆ ಗೊತ್ತಾಗಿದ್ದು, ಅವರು ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದವರಾಗಿದ್ದಾರೆಂದು. ಅವರು ಬಹಳ ಸರಳ ಜೀವಿಗಳಾಗಿದ್ದರು. ಮಾನ್ಯ ಉಸ್ತಾದ್‌ರವರು ಕೂಡ ಅಷ್ಟೆ. ಸ್ನೇಹಿತರ ಜೊತೆ ಸ್ನೇಹಿತರಾಗಿ, ಹುಡುಗರಾಗಿದ್ದುಕೊಂಡು ಮಂತ್ರಿಗಿರಿ ಕೆಲಸವನ್ನು ಮಾಡುತ್ತಿದ್ದಂಥವರು. ಅವರೆಲ್ಲರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲೆಂದು ನಾನು ಹಾರೈಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ):– ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತೇನೆ. ನಾನು ಅನೇಕ ಸ್ಸಾರಿ ಇಂಥ ಸಂಧರ್ಬ ಬಂದಾಗಲೆಲ್ಲಾ ಮಾತನಾಡುವಾಗ ತಮ್ಮಲ್ಲಿ ಮನವಿ ಮಾಡಿದ್ದೇನೆ. ಈ

ರೀತಿಯಲ್ಲಿ ನಿಧನ ಹೊಂದಿದಂಥ ಮಾಜಿ ಮಂತ್ರಿಗಳು, ಮಾಜಿ ಶಾಸಕರುಗಳ ಕುಟುಂಬದ ಪರಿಸ್ಥಿತಿ ಬಗ್ಗೆ ಮತ್ತು ಅವರ ವ್ಯವಸ್ಥೆ ಬಗ್ಗೆ ತಿಳಿಯಲು ಸದನ ಸಮಿತಿಯನ್ನು ಮಾಡಿ ಅದರಿಂದ ವರದಿಯನ್ನು ತರಿಸಿಕೊಂಡು, ಅವರ ಜೀವನ ಭದ್ರತೆ ಹೇಗಿದೆಯೆಂದು ತಿಳಿದುಕೊಳ್ಳುವ ಸಲುವಾಗಿ ತಾವು ಈ ಬಗ್ಗೆ ಪರಾಮರ್ಶೆ ಮಾಡಬೇಕೆಂದು ಈ ಹಿಂದೆ ಅನೇಕ ಸಾರಿ ನಾನು ಹೇಳಿದ್ದೆ. ಅದನ್ನು ಮಾಡದೇ ಇದ್ದರೆ ಏನಾಗುತ್ತದೆಂದರೆ, ಇದೊಂದು ರೀತಿ ಸಂಪ್ರದಾಯವಾಗಿದೆ ಪ್ರತಿ ಸಾರಿ ಒಂದೆರಡ್ಮೂರು ಪುಟಗಳಲ್ಲಿ ಸತ್ತವರುಗಳ ಹೆಸರುಗಳನ್ನು ಹೇಳಿ, ಅವರ ಬಗ್ಗೆ ನಾವು ಈ ಸದನದಲ್ಲಿ ಕೇವಲ ಮಾತನಾಡಿ ಹೋದರೆ ಏನೂ ಪ್ರಯೋಜನವಾದಂತಾಗುವುದಿಲ್ಲ. ಆದಕಾರಣ ನಾನು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯಿಂದ ಮನವಿ ಮಾಡುತ್ತೇನೆ, ಅನೇಕ ಮಾಜಿ ಶಾಸಕರುಗಳು ತಮ್ಮ ಕೊನೆಯ ದಿನಗಳಲ್ಲಿ ಬಹಳ ತೊಂದರೆಗಳನ್ನು ಅನುಭವಿಸು ತ್ತಿರುವಂಥವರು ಇದ್ದಾರೆ. ಇಂಥವರ ಜೀವನ ಭದ್ರತೆ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ತಾವು ಅಧ್ಯಕ್ಷರಾದಂಥವರು ಪ್ರಾಮಾಣಿಕ ಚಿಂತನೆ ಮಾಡಬೇಕಾದುದು ತಮ್ಮ ಕರ್ತವ್ಯವೆಂದು ನಾನು ಹೇಳಬಯಸುತ್ತೇನೆ. ಅದನ್ನು ಮಾಡಬೇಕೆಂದು ಮತ್ತೊಮ್ಮೆ ತಮಗೆ ನಾನು ಹೇಳಬಯಸುತ್ತೇನೆ ಮತ್ತು ಈ ಒಂದು ಸಂತಾಪ ಸೂಚನೆ ನಿರ್ಣಯಕ್ಕೆ ಸಂಬಂಧಪಟ್ಟಂತೆ ಕೆಲವೊಂದು ವಿಷಯಗಳನ್ನು ಹೇಳಬಯಸುತ್ತೇನೆ. ಮಾನ್ಯ ವೈ. ರಾಮಚಂದ್ರರವರು ಬೆಂಗಳೂರನ್ನು ಕಟ್ಟಿದಂಥ ಅತ್ಯಂತ ಧೀಮಂತ ಒಂದು ಶಕ್ತಿಯಾಗಿದ್ದರು. ಬೆಂಗಳೂರಿನಲ್ಲಿ ಪ್ರಪ್ರಥಮವಾಗಿ ಕೆಂಪೇಗೌಡ ಪ್ರತಿಮೆ ಬಂದದ್ದು ನಿಜಲಿಂಗಪ್ಪನವರ ಕಾಲದಲ್ಲಿ ಇವರು ಮಂತ್ರಿಗಳಾಗಿದ್ದಾಗ. ನನ್ನ ಮತ್ತು ಅವರ ಸ್ನೇಹ ಅತ್ಯಂತ ವಿಶ್ವಾಸಕರವಾಗಿತ್ತು ಮತ್ತು ಸ್ನೇಹಪರವಾಗಿತ್ತು. ಆದರೆ ಅವರು ಚುನಾವಣೆಯಲ್ಲಿ ನಿಂತು ನನಗೆ ಅವರು ಪರಾಜಿತರಾದರು. ತದನಂತರದ ದಿನಗಳಲ್ಲಿ ಅವರು ವಿಧಾನ ಪರಿಷತ್ತಿಗೆ ಹೋಗಲು ನಾನೂ ಕೂಡ ಅವರಿಗೆ ಮತ ಕೊಟ್ಟು ಅವರನ್ನು ಗೆಲ್ಲಿಸುವಂಥ ವಿಚಾರದಲ್ಲಿ ಮುಂದಾಗಿದ್ದೆ. ಇವರು ರಾಜ್ಯಕ್ಕೋಸ್ಕರವಾಗಿ ತ್ಯಾಗ ಮಾಡಿದಂಥವರಾಗಿದ್ದರು. ನಿಜಲಿಂಗಪ್ಪನವರ ಅತ್ಯಂತ ಕಟ್ಟಾ ಅಭಿಮಾನಿಗಳಲ್ಲಿ ಒಬ್ಬರಾದಂಥವರು ವೈ. ರಾಮಚಂದ್ರರವರಾಗಿದ್ದರು. ಇವರು ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ...., ಇವೊತ್ತೇನು ನಾವು ಬೆಂಗಳೂರು ಮುಂದೆ ಹೇಗಿರಬೇಕೆಂದು ಕಾಣುತ್ತಿದ್ದೇವೆ ಅದನ್ನು ಆಗಲೇ ಹಿಂದೆಯೇ ಇವರು ಬೆಂಗಳೂರು ಮುಂದೆ ಯಾವ ರೀತಿ ಬೆಳೆಯಬೇಕು, ಯಾವ ರೀತಿ ಜನರಿಗೆ ಅನುಕೂಲ ಆಗಬೇಕೆಂದು ಹೇಳಿದ್ದರು. ಅವರು

ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್‌ರವರೂ ಕೂಡ ಆಗಿದ್ದರು. ಬೆಂಗಳೂರು ಸೇರಿದಂತೆ ಸಚಿವರೂ ಕೂಡ ಆಗಿದ್ದರು. ನಿಜಲಿಂಗಪ್ಪನವರ ಕಟ್ಟಾ ಅಭಿಮಾನಿಗಳಲ್ಲಿ ಇವರೊಬ್ಬರಾಗಿದ್ದರು. ಅದೇ ರೀತಿ ಎಂ.ಎಲ್. ಉಸ್ತಾದ್‌ರವರು, ಬಳವಂತರಾವ್ ದೇವರಾಯ್ ಪಾಟೀಲ್‌ರವರು ಮತ್ತು ಬಸಪ್ಪನವರು, ಮಂಜಪ್ಪ ಉಳ್ಳಾಲ್‌ರವರು . ಡಿ. ಹಲಗೇಗೌಡರು, ಇವರೆಲ್ಲರ ನಿಧನದಿಂದ ಈ ರಾಜ್ಯಕ್ಕೆ ದೊಡ್ಡ ನಷ್ಟವಾಗಿದೆ. ಇವರುಗಳಲ್ಲದೇ ಇನ್ನೂ ಕೆಲವರು ಪ್ರಮುಖರಾದವರು ನಿಧನರಾಗಿರುವ ಬಗ್ಗೆ ಸದನದ ಗಮನಕ್ಕೆ ತಂದಿಲ್ಲ. ಸಂತಾಪ ಸೂಚನೆಯಲ್ಲಿ ಹೆಸರಾಂಥ ಕಥೆಗಾರರೂ ಹಾಗೂ ಹಿರಿಯ ಪತ್ರಕರ್ತರಾಗಿದ್ದಂಥ ಮಾನ್ಯ ಜಿ.ಎಸ್. ಸದಾಶಿವರವರು ನಿಧನ ಹೊಂದಿದ್ದಾರೆ. ಅವರನ್ನು ಈ ಸಂತಾಪ ಸೂಚನೆಯಲ್ಲಿ ಸೇರಿಸದೆ ಕೈ ಬಿಡಲಾಗಿದೆ. ಇದು ಏತಕ್ಕೆ ಎಂದು ನನಗೆ ಅರ್ಥವಾಗಲಿಲ್ಲ. ಮಾನ್ಯ ಅಧ್ಯಕ್ಷರೆ, ನಿಮ್ಮ ಕಾರ್ಯಾಲಯದವರು ಇವರ ಬಗ್ಗೆ ಮಾಹಿತಿ ತರಿಸಿ ತಕ್ಷಣ ಸೇರಿಸಬೇಕಾಗಿತ್ತು. ಮಾನ್ಯ ಸದಾಶಿವರವರು ಬರಹಗಾರರಾಗಿ, ಪತ್ರಕರ್ತರಾಗಿ, ಕಥೆಗಾರರಾಗಿ ಈ ನಾಡಿಗೆ ಅಪಾರವಾದಂಥ ಸೇವೆಯನ್ನು ಮತ್ತು ಒಳ್ಳೆಯ ಕೆಲಸವನ್ನು ಮಾಡಿದಂಥವರಾಗಿದ್ದರು. ಇಂಥವರ ನಿಧನದ ಬಗ್ಗೆ ನಾವು ಇಲ್ಲಿ ಸಂತಾಪವನ್ನು ಮಾಡದಿದ್ದರೆ ಎಲ್ಲೋ ಒಂದು ಕಡೆ ನಾವು ಲೋಪ ಮಾಡಿದಂತಾಗುತ್ತದೆ. ಅದೇ ರೀತಿ ವೈ.ಕೆ. ರಾಜಗೋಪಾಲ್ ಎನ್ನುವ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ವರದಿಗಾರರಾಗಿದ್ದಂಥವರು ಕೂಡ ನಿಧನ ಹೊಂದಿರುವ ಬಗ್ಗೆ ಈ ಸಂತಾಪ ಸೂಚನೆ ಪಟ್ಟಿಯಲ್ಲಿ ಸೇರಿಸಿಲ್ಲ. ನಾನು ಹೇಳುವುದೇನೆಂದರೆ, ಮೊಟ್ಟಮೊದಲು ಮಹಾಜನ್ ವರದಿಯನ್ನು ಬಹಿರಂಗ ಪಡಿಸತಕ್ಕಂಥ ಕಾರ್ಯದಲ್ಲಿ ಇವರು ಮೊದಲನೆಯ ವ್ಯಕ್ತಿಯಾಗಿದ್ದರು. ಮಹಾಜನ್ ವರದಿಯನ್ನು ಪ್ರಪ್ರಥಮವಾಗಿ ಬಹಿರಂಗ ಪಡಿಸಿದವರು ವರದಿಗಾರರಾಗಿದ್ದ ಮಾನ್ಯ ವೈ.ಕೆ. ರಾಜಗೋಪಾಲ್‌ರವರು. ಅವರ ಸಾವಿನ ಅಂತ್ಯ ಹೇಗಾಯಿತೆಂದರೆ ಅದನ್ನು ಇಲ್ಲಿ ವರ್ಣನೆ ಮಾಡುವುದಕ್ಕಾಗುವುದಿಲ್ಲ. ಒಬ್ಬ ಹಿರಿಯ ಪತ್ರಕರ್ತನಾಗಿ ಎಷ್ಟು ಹೀನಾಯವಾಗಿ ನೋವಿನಲ್ಲಿ ನರಳಿ ಅವರು ಚಿಂತೆಪಟ್ಟು ಸತ್ತರೆಂದರೆ ಅವರ ಕುಟುಂಬದ ಜೀವನದ ಭದ್ರತೆ ಬಗ್ಗೆ ಮತ್ತು ಅವರ ಬಗ್ಗೆ ನಾವ್ಯಾರೂ ಕಳಕಳಿಯನ್ನು ತೋರಿಸಲಿಲ್ಲ. ಈ ರೀತಿ ನಾವು ನಡೆದುಕೊಂಡಿರುವ ಬಗ್ಗೆ ನಾನು ವ್ಯಾಖ್ಯಾನ ಮಾಡದೇ ಇದ್ದರೂ ಕೂಡ ನೋಡಿದವರಿಗೆ ಏನೋ ಒಂದು ರೀತಿಯಲ್ಲಿ ಮೊಸಳೆ ಕಣ್ಣೀರು, ಸತ್ತವರ ಬಗ್ಗೆ ಒಂದ್ನಾಲ್ಕು ಮಾತುಗಳನ್ನಾಡುತ್ತಾರೆನ್ನುವಂತಾಗುತ್ತದೆ. ಇಂಥ ಒಂದು ಸದನದಲ್ಲಿ

ಮಾತನಾಡುವಾಗ ಇಂಥವರ ಬಗ್ಗೆ ಹಾಗೂ ಅವರ ಕುಟುಂಬದವರ ಬಗ್ಗೆ ನಾವೇನು ಮಾಡುತ್ತೇವೆ ಎನ್ನುವ ಬಗ್ಗೆ ಚಿಂತನೆ ಆಗಬೇಕು. ವೈ.ಕೆ. ರಾಜಗೋಪಾಲ್‌ರವರಿಗೆ ಯಾರೂ ಇಲ್ಲದಿದ್ದರೂ ಕೂಡ ಅವರ ಸಾವಿನ ಕೊನೆಯ ದಿನಗಳಲ್ಲಿ ಪ್ರತಿ ನಿತ್ಯ ಅವರು ಇಲ್ಲಿಗೆ ಬಂದು ಕುಳಿತುಕೊಳ್ಳುತ್ತಿದ್ದರು, ಪ್ರತಿ ಬಾರಿ ಎಲ್ಲಾ ಪತ್ರಿಕಾ ಸಮ್ಮೇಳನಕ್ಕೆ ಬರುತ್ತಿದ್ದರು, ಪ್ರತಿ ನಿತ್ಯ ಎಲ್ಲಾ ಕಡತಗಳನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳುತ್ತಿದ್ದರು, ಓದುತ್ತಿದ್ದರು, ಕಡತಗಳನ್ನು ನೋಡುತ್ತಿದ್ದರು. ಅಂಥ ವ್ಯಕ್ತಿ ಅಗಲಿದಾಗ ನಾವು ಇಲ್ಲಿ ಸ್ಮರಣೆ ಮಾಡಬೇಕು. ಇವರಲ್ಲದೇ ಮತ್ತೊಬ್ಬ ವ್ಯಕ್ತಿ ಬಗ್ಗೆ ತಮಗೆ ಗೊತ್ತಿರಬೇಕು, ಹೊಟ್ಟೆಪಕ್ಷದ ರಂಗಸ್ವಾಮಿಯವರು ಗಿನ್ನಿಸ್ ದಾಖಲೆಯನ್ನು ಮಾಡಿದಂಥವರು. ಇವರು ಇಡೀ ರಾಜ್ಯದಲ್ಲಿ ಒಂದು ವಿಶಿಷ್ಟವಾದಂಥ ಸ್ಥಾನವನ್ನು ಪಡೆದಿದ್ದರು. ವರ್ಣರಂಜಿತವಾದ ವ್ಯಕ್ತಿತ್ವವನ್ನು ಹೊಂದಿದ್ದರು. ಇವರು ರಸ್ತೆ ರಸ್ತೆಗಳಲ್ಲಿ ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಪ್ರಪ್ರಥಮವಾಗಿ ಈ ದೇಶದಲ್ಲಿ ಮಾರಿದಂಥ ವ್ಯಕ್ತಿಯಾಗಿದ್ದರು. ಇಂಥ ಹೊಟ್ಟೆಪಕ್ಷದ ರಂಗಸ್ವಾಮಿಯವರ ಬಗ್ಗೆ ಕೂಡ ಇಲ್ಲಿ ಚರ್ಚೆ ಮಾಡುವುದಕ್ಕೆ ಸಂತಾಪ ಸೂಚನಾ ಪಟ್ಟಿಯಲ್ಲಿ ಸೇರಿಸಿ ಅವಕಾಶ ಕೊಡಬೇಕಾಗಿತು. ಇನ್ನು ಮುಂದಾದರೂ ಮುಂದಿನ ದಿನಗಳಲ್ಲಿ ಪ್ರಾಮಾಣಿಕವಾಗಿ ಇಂಥವರುಗಳ ಬಗ್ಗೆ ಗಮನ ಹರಿಸಬೇಕು. ಕೇವಲ ಇಲ್ಲಿ ನಿಧನ ಹೊಂದಿದವರ ಬಗ್ಗೆ ಸಂತಾಪ ಸೂಚನೆ ಮಾಡಿದರೆ ಸಾಲದು. ಇಂಥವರ ಕುಟುಂಬದವರ ಜೀವನ ಭದ್ರತೆ ಬಗ್ಗೆ ಕೂಡ ಗಮನ ಹರಿಸಬೇಕು. ಮಾಜಿ ಶಾಸಕರಿರಬಹುದು, ಮಾಜಿ ಮಂತ್ರಿಗಳೆ ಇರಬಹುದು, ಒಬ್ಬ ಹಿರಿಯ ಪತ್ರಕರ್ತರಾಗಿ ಕೂಡ ಕೆಲವರು ಕೆಲಸ ಮಾಡಿ ನಿಧನ ಹೊಂದಿರುತ್ತಾರೆ. ಇಂಥವರುಗಳ ಬಗ್ಗೆ ಕೂಡ ಚಿಂತನೆಯನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ತಾವು ಈ ಪಟ್ಟಿಯಲ್ಲಿ ನಿಧನ ಹೊಂದಿರುವ ಇಂಥವರುಗಳ ಬಗ್ಗೆ ಸೇರಿಸದಿದ್ದರೂ ಕೂಡ ನಾನು ಸದಾಶಿವರವರಿಗೆ ಮತ್ತು ವೈ.ಕೆ. ರಾಜ್‌ಗೋಪಾಲ್‌ರವರಿಗೆ ಹಾಗೂ ಹೊಟ್ಟೆಪಕ್ಷದ ರಂಗಸ್ವಾಮಿಯವರ ಹೆಸರುಗಳನ್ನೂ ಕೂಡ ಸೇರಿಸಿಕೊಂಡು ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಭಗವಂತನಲ್ಲಿ ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೆಪಲ್ಲಿ):–ಮಾನ್ಯ ಅಧ್ಯಕ್ಷರೆ, ತಾವೇನು ಇಂದು ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ ಅದಕ್ಕೆ ನಾನು ನನ್ನ ಬೆಂಬಲವನ್ನು ವ್ಯಕ್ತಮಾಡುತ್ತೇನೆ. ಈ ಪಟ್ಟಿಯಲ್ಲಿ ಇತ್ತೀಚೆಗೆ ಅಪಘಾತದಲ್ಲಿ ನಿಧನ ಹೊಂದಿದ ಹರಪನಹಳ್ಳಿಯ ಶಾಸಕರಾಗಿದ್ದಂಥ ಶ್ರೀ ನಾರಾಯಣ

ದಾಸ್‌ರವರ ಹೆಸರನ್ನು ಸೇರಿಸಬೇಕಾಗಿತ್ತು. ಈ ಪಟ್ಟಿಯಲ್ಲಿ ಅವರ ಹೆಸರನ್ನು ಸೇರಿಸಿಲ್ಲ. ಏಕೆ ಅವರ ಹೆಸರನ್ನು ಸೇರಿಸಿಲ್ಲವೆನ್ನುವ ಬಗ್ಗೆ ನನಗೆ ಅರ್ಥವಾಗಿಲ್ಲ. ಅವರು ಮಂತ್ರಿಗಳಾಗಿದ್ದಂಥವರು. ನಿಧನ ಹೊಂದಿದ ಮಂತ್ರಿಗಳಾಗಿದ್ದಂಥವರ ಹೆಸರನ್ನೇ ಪಟ್ಟಿಯಲ್ಲಿ ಕೈಬಿಟ್ಟಿರುವುದರಿಂದ ತಮ್ಮ ಕಾರ್ಯಾಲಯ ಕೆಲಸದ ಬಗ್ಗೆ ನಮ್ಮೆಲ್ಲರಿಗೂ ಸ್ವಲ್ಪ ಅತೃಪ್ತಿ ಬರುತ್ತದೆ. ಈಗಾಗಲೇ ಮಾನ್ಯ ವಾಟಾಳ್‌ರವರು ಮಾತನಾಡುವಾಗ ಕೆಲವು ಪ್ರಮುಖರ ಹೆಸರನ್ನು ಸಂತಾಪ ಸೂಚನಾ ಪಟ್ಟಿಯಲ್ಲಿ ಕೈ ಬಿಟ್ಟಿರುವ ಬಗ್ಗೆ ಪ್ರಸ್ತಾಪ ಮಾಡಿದರು. ಮಾನ್ಯ ಸದಾಶಿವ, ಮಾನ್ಯ ವೈ.ಕೆ. ರಾಜಗೋಪಾಲ್ ರವರುಗಳ ಹೆಸರನ್ನು ಸೇರಿಸಿಲ್ಲದಿರುವ ಬಗ್ಗೆ ಅವರು ಹೇಳಿದರು. ಆದರೆ ಮಾನ್ಯ ನಾರಾಯಣದಾಸ್‌ರವರು ಹಿಂದೆ ಮಂತ್ರಿಗಳಾಗಿದ್ದಂಥವರು. ಈ ಸದನದ ಸದಸ್ಯರಾಗಿದ್ದರು. ಅವರು ಬೆಳಗಾಂ ಅಧಿವೇಶನದ ಸಮಯದಲ್ಲಿ ಸತ್ತಿದ್ದಲ್ಲ, ಹರಪನಹಳ್ಳಿ ಎಂಎಲ್‌ಎ ಮಾಜಿ ಶಾಸಕರು ಹಾಗೂ ಮಾಜಿ ಮಂತ್ರಿಗಳಾಗಿದ್ದವರು ಬೆಳಗಾಂ ಅಧಿವೇಶನ ಆದಮೇಲೆ ಮೊನ್ನೆ 15 ಅಥವಾ 20 ದಿವಸದ ಹಿಂದೆ ಅವರು accident ನಲ್ಲಿ ಸತ್ತರು. ಬೆಳಗಾಂ ಅಧಿವೇಶನದ ಸಮಯದಲ್ಲಿ ಅವರು ಸತ್ತಿರಲಿಲ್ಲ. ಅಂತಹ ಪ್ರಮುಖವಾದಂತಹ ವ್ಯಕ್ತಿಯ ಹೆಸರನ್ನು ಇವತ್ತು ಕೈಬಿಟ್ಟಿದ್ದಾರೆ. ಇದು ಸರಿಯಲ್ಲ. ಇವತ್ತು ಸಂತಾಪ ಸೂಚನಾ ನಿರ್ಣಯದಲ್ಲಿರುವ ಕೆಲವು ಜನರ ಪರಿಚಯ ಇಲ್ಲ. ಮೊನ್ನೆ ಮಾನ್ಯ ಶಿವಾನಂದ ಪಾಟೀಲ್ ಅವರು ಧರಣಿ ಕುಳಿತುಕೊಂಡಂತಹ ಸಂದರ್ಭದಲ್ಲಿ ನಾನು ಅವರ ಜೊತೆ ಕುಳಿತುಕೊಂಡಿದ್ದಾಗ ಮಾನ್ಯ ಉಸ್ತಾದ್‌ವರು ಕೂಡ ಬಂದು ನಮ್ಮ ಜೊತೆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಅವರು ಇಷ್ಟು ಬೇಗ ಸಾಯುತ್ತಾರೆ ಎಂದು ಗೊತ್ತಿರಲಿಲ್ಲ. ದಿನಾಂಕ 25 ರಂದು ಮಾನ್ಯ ರಾಜ್ಯಪಾಲರ ಭಾಷಣ ಇದ್ದಾಗ ಧರಣಿ ಸತ್ಯಾಗ್ರಹ ಕುಳಿತಿದ್ದರು. ಆದರೆ ಅವರು ದಿನಾಂಕ 31 ರಂದು ಸತ್ತಿದ್ದಾರೆ. ಮಾನ್ಯ ವೈ. ರಾಮಚಂದ್ರ ಅವರು ಸ್ವಾತಂತ್ರ್ಯ ಚಳುವಳಿಯ ಹೋರಾಟಗಾರರು. ಸ್ವಾತಂತ್ರ್ಯ ಚಳುವಳಿಯ ಆಶಯಗಳು ಇವತ್ತು ಈ ದೇಶದಲ್ಲಿ ಹಿಂದಕ್ಕೆ ಸರಿಯುತ್ತಿವೆ. ಆ ಆಶಯಗಳೆಲ್ಲಾ ಇವತ್ತು ನಿರಾಸೆಯಾಗುತ್ತಿವೆ. ಅಂತಹ ಸಂದರ್ಭದಲ್ಲಿ ಈ ಸ್ವತಂತ್ರ ಚಳುವಳಿಯ ಸೇನಾನಿಗಳ ಕಡೆಯ ಕೊಂಡಿಗಳು ಕಳಚಿಕೊಳ್ಳುತ್ತಿವೆ. ಅವರ ಆಶಯಗಳು ನಮ್ಮೆಲ್ಲರಿಗೂ ಕೂಡ ಮಾರ್ಗದರ್ಶನ ವಾಗಿರತಕ್ಕಂಥ ಆಶಯಗಳು. ಆ ಆಶಯಗಳನ್ನು ಮುಂದುವರಿಸುವುದರ ಮುಖಾಂತರ ಮಾನ್ಯ ವೈ. ರಾಮಚಂದ್ರ ಅವರಿಗೆ ನಿಜವಾದಂತಹ ಸಂತಾಪವನ್ನು ಸಲ್ಲಿಸಿದ ಹಾಗೆ ಆಗುತ್ತದೆಂದು ಹೇಳುತ್ತಾ ತಾವು

ತಂದಿರುವಂತಹ ಸಂತಾಪಸೂಚನ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ(ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಸಂತಾಪಸೂಚನಾ ನಿರ್ಣಯವನ್ನು ಬೆಂಬಲ ಮಾಡುತ್ತಾ, ಮಾನ್ಯ ನಾರಾಯಣದಾಸ್ ಅವರು ಸೇರಿದಂತೆ ಏಳು ಜನ ಅಗಲಿದ್ದಾರೆ. ಮಾನ್ಯ ನಾರಾಯಣ್‌ದಾಸ್‌ರವರು ಈ ಸದನದ ಸದಸ್ಯರಾಗಿದ್ದರು. ಅವರು ಬೆಳಗಾಂ ಅಧಿವೇಶನ ಆದಮೇಲೆ accidentನಲ್ಲಿ ಸತ್ತಿರುವುದು.

ಅಧ್ಯಕ್ಷರು: ನಿರ್ಣಯದಲ್ಲಿ ಸೇರಿಸಬೇಕಾಗಿತ್ತು. ಅದು ಲೋಪವಾಗಿದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾರಾಯಣದಾಸ್ ಅವರು ಹರಪನಹಳ್ಳಿಯಿಂದ 3–4 ಬಾರಿ ಆಯ್ಕೆಯಾಗಿದ್ದರು. ಅವರು ಮಂತ್ರಿ ಹಾಗೂ ಎಂಎಲ್‌ಸಿ ಕೂಡ ಆಗಿದ್ದರು. ಇವತ್ತು ನಿರ್ಣಯದಲ್ಲಿ ಅವರ ಹೆಸರನ್ನು ಸೇರಿಸಿಕೊಂಡು ಬಿಡಿ ಒಳ್ಳೆಯದು. ಇವತ್ತು ಏಳು ಜನ ಈ ಸದನದ ಸದಸ್ಯರಾಗಿದ್ದವರು ನಮ್ಮನ್ನು ಅಗಲಿದ್ದಾರೆ. ಅವರಲ್ಲಿ ಮಾನ್ಯ ವೈ. ರಾಮಚಂದ್ರರವರು ಸದಸ್ಯರಾಗಿದ್ದಾಗ ನಾವು ಇರಲಿಲ್ಲ. ಆದರೆ ಅವರ ಪರಿಚಯ ಚೆನ್ನಾಗಿ ಇದೆ. ಮಾನ್ಯ ವೈ. ರಾಮಚಂದ್ರರವರು ಮಾನ್ಯ ನಿಜಲಿಂಗಪ್ಪನವರ ಸಂಪುಟದಲ್ಲಿ ಈ ರಾಜ್ಯದ ಮಂತ್ರಿಯಾಗಿದ್ದರು. ಜೊತೆಗೆ ಬೆಂಗಳೂರು ನಗರದ ಮಹಾಪೌರರಾಗಿದ್ದರು. ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದವರು. ಎಲ್ಲಾದಕ್ಕಿಂತ ಹೆಚ್ಚಾಗಿ ನಾವು ಅವರಿಂದ ಪ್ರೇರಣೆ ಪಡೆಯಬೇಕಾಗಿರುವು–ದೇನೆಂದರೆ ಸಾಮಾಜಿಕ ನ್ಯಾಯಕ್ಕಾಗಿ ಅವರು ಬಹಳ ಬದ್ಧರಾಗಿ ಕೆಲಸ ಮಾಡಿದವರು. ಹಿಂದುಳಿದವರು , ದಲಿತರು, ಸಾಮಾಜಿಕ ನ್ಯಾಯದಿಂದ ವಂಚಿತರಾಗಿರುವವರು, ಶೋಷಿತರ ಪರವಾಗಿ ಮಾನ್ಯ ವೈ. ರಾಮಚಂದ್ರರವರನ್ನು ನಾವು ಯಾವಾಗ ಭೇಟಿ ಮಾಡಿದಾಗಲೂ ಕೂಡ ಆ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದರು. ಅವರು ಅವರದೇ ಆದಂತಹ ಸಂಘಟನೆ ಕಟ್ಟಿಕೊಂಡು ಅನ್ಯಾಯಕ್ಕೆ ಒಳಗಾದಂಥ ಈ ವರ್ಗದ ಜನರ ಪರವಾಗಿ ಜೀವನದುದ್ದಕ್ಕೂ ಕೂಡ ಹೋರಾಟ ಮಾಡಿಕೊಂಡು ಬಂದಂತಹ ವ್ಯಕ್ತಿ ಎಂದು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅಲ್ಲದೆ ಅವರು ಒಬ್ಬ ಶಿಕ್ಷಣ ತಜ್ಞರು ಕೂಡ ಆಗಿದ್ದರು. ಅವರು ಅನೇಕ ಶಿಕ್ಷ ಣ ಸಂಸ್ಥೆಗಳ ಅಧ್ಯಕ್ಷರು ಆಗಿದ್ದರು. ಅವರು ಸ್ವತ: ಶಿಕ್ಷಣ ಸಂಸ್ಥೆಗಳನ್ನು ಕೂಡ ನಡೆಸುತ್ತಿದ್ದರು. ಈಗಲೂ ಕೂಡ ಸಾಯಿಬಾಬಾ ವಿದ್ಯಾ ಸಂಸ್ಥೆ ಎಂದು ರಾಜಾಜಿನಗರದಲ್ಲಿ ಒಂದು ವಿದ್ಯಾಸಂಸ್ಥೆ

ಇದೆ. ಅದನ್ನು ಈಗಲೂ ಕೂಡ ಅವರ ಮಕ್ಕಳು ನೋಡಿಕೊಳ್ಳುತ್ತಿದ್ದಾರೆ. ಅವರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ, ಬೆಳೆಸಿ ಜನರಿಗೆ ಒಳ್ಳೆಯ ಶಿಕ್ಷಣ ಸಿಗಬೇಕು ಎನ್ನುವಂತಹ ಕಾಳಜಿಯನ್ನು ಇಟ್ಟುಕೊಂಡಿದ್ದವರು. ಜನಪರ ಕಾಳಜಿ ಇದ್ದಂತಹ ವ್ಯಕ್ತಿ ಇವತ್ತು ನಮ್ಮನ್ನಗಲಿದ್ದಾರೆ. ಅವರು 85 ವರ್ಷಗಳ ದೀರ್ಘಕಾಲ ಬದುಕಿದ್ದರು. ಅವರ ನೆನಪು ಸದಾ ಚಿರಾಯುವಾಗಿರಲಿ ಎಂದು ಹೇಳುತ್ತಾ ಅವರಿಂದ ನಮಗೆ ಸ್ಫೂರ್ತಿ ಮತ್ತು ಅವರಿಗೆ ಇದ್ದಂತಹ ಬದ್ಧತೆ ನಮಗೆ ಬರಲಿ ಎಂದು ಹೇಳುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ಎಂ.ಎಲ್. ಉಸ್ತಾದ್ ರವರು ಕೂಡ ನಮ್ಮ ಜೊತೆಯಲ್ಲಿ ಶಾಸಕರಾಗಿದ್ದವರು. ಅವರು ಮೂರು ಬಾರಿ ಬಿಜಾಪುರದಿಂದ ಆರಿಸಿಬಂದು ಶಾಸಕರಾಗಿದ್ದರು ಮತ್ತು ಮಂತ್ರಿಗಳಾಗಿದ್ದರು. ವಕೀಲರೂ ಕೂಡ ಆಗಿದ್ದರು. ನಾವು ಆ ಕಡೆ ಕುಳಿತುಕೊಂಡಿದ್ದಾಗ ಅವರು ಸದನದಲ್ಲಿ ಈ ಕಡೆ ಹಿಂದುಗಡೆ ಕುಳಿತುಕೊಂಡು ಬಹಳ ತಮಾಷೆಯಾಗಿ ಮಾತನಾಡುತ್ತಿದ್ದರು. ಬಹಳ ಎದ್ದೆದ್ದು ಹೆಚ್ಚು ಗಲಾಟೆ ಮಾಡುತ್ತಿದ್ದರು. ಬಹಳ ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಅವರು ಅನೇಕ ಬಾರಿ ಸದನವನ್ನು ನಗೆಗಡಲಿನಲ್ಲಿ ತೇಲಿಸುವಂತಹ ಕೆಲಸವನ್ನು ಕೂಡ ಮಾಡುತ್ತಿದ್ದರು. ಮಾನ್ಯ ರಮೇಶ್‌ಕುಮಾರ್ ರವರು ಸಭಾಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ಅವರು ಶಾಸಕರಾಗಿದ್ದರು ಮತ್ತು ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಅವರೂ ಕೂಡ ನಮ್ಮನ್ನು ಅಗಲಿದ್ದಾರೆ. ಅವರಿಗೆ ಸಂತಾಪವನ್ನು ವ್ಯಕ್ತಪಡಿಸುತ್ತಾ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಬಯಸುತ್ತೇನೆ.

ಮಾನ್ಯ ಬಳವಂತರಾವ್ ದೇವರಾವ್ ಪಟೇಲ್ ರವರು ಕೂಡ ನಿಧನರಾಗಿದ್ದಾರೆ. ಅವರ ಪರಿಚಯ ನಮಗೆ ಇಲ್ಲ. ಅವರ ಆತ್ಮಕ್ಕೂ ಕೂಡ ಶಾಂತಿ ದೊರಕಲಿ ಎಂದು ಬಯಸುತ್ತೇನೆ.

ಮಾನ್ಯ ಎಂ. ಬಸಪ್ಪನವರು ಕೂಡ ಜನತಾ ದಳದ ಶಾಸಕರಾಗಿದ್ದರು. ಅವರು ಕೆಸಿಪಿ ಯಿಂದ ಬಂದು ನಮ್ಮ ಜನತಾ ದಳಕ್ಕೆ ಸೇರಿಕೊಂಡರು. ಅವರು ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದರು. ಅವರು ಹೊರಗಡೆ ದೇಶದಿಂದ ಡಿಗ್ರಿ ಪಡೆದುಕೊಂಡು ಬಹಳ ಉತ್ತಮವಾಗಿ ಕೆಲಸ ಮಾಡಿ ಈ ಸಮಾಜಕ್ಕೆ ಬಹಳಷ್ಟು ಕೊಡುಗೆಯನ್ನು ಕೊಟ್ಟಿದ್ದಾರೆ. ಅವರು ನಿಧನರಾಗಿದ್ದಾರೆ. ಅವರ ಆತ್ಮಕ್ಕೂ ಕೂಡ ಶಾಂತಿ ದೊರಕಲಿ ಎಂದು ಬಯಸುತ್ತೇನೆ.

ಮಾನ್ಯ ಮಂಜಪ್ಪ ಉಳ್ಳಾಲ್ , ದಕ್ಷಿಣ ಕನ್ನಡ ಜಿಲ್ಲೆಯವರು ಇವರು ಕೂಡ ನಮ್ಮನ್ನು ಅಗಲಿದ್ದಾರೆ.

ಮಾನ್ಯ ಡಿ. ಹಲಗೇಗೌಡ ರವರು ಮಂಡ್ಯಾ ಜಿಲ್ಲೆಯವರು ಬಹಳ ಆತ್ಮೀಯ ಪರಿಚಯವಿದ್ದವರು. ಬಹಳ ಸರಳ ಹಾಗೂ ಸೌಮ್ಯವಾದಂತಹ ವ್ಯಕ್ತಿ. ಎಲ್ಲರ ಜೊತೆ ಸ್ನೇಹಭಾವ ಇಟ್ಟುಕೊಂಡಂತಹ ಸಜ್ಜನಿಕೆಯ ವ್ಯಕ್ತಿ ಅಗಲಿದ್ದಾರೆ. ಅವರು ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು. ಮಂಡ್ಯದಲ್ಲಿ ಡಿಸಿಸಿ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ನಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಅವರು ಎರಡು ಬಾರಿ ಸದನದ ಸದಸ್ಯರಾಗಿದ್ದರು. ಇಂತಹ ಒಬ್ಬ ಅತ್ಯಂತ ಹಿರಿಯ ವ್ಯಕ್ತಿ ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಆಶಿಸುತ್ತೇನೆ.

ಇನ್ನು ಮಾನ್ಯ ನಾರಾಯಣ ದಾಸ್ ರವರು ಎಂಎಲ್‌ಎ ಆಗಿದ್ದರು. ಮೇಲ್ಮನೆಯ ಸದಸ್ಯರಾಗಿದ್ದರು ಹಾಗೂ ಮಂತ್ರಿಯಾಗಿದ್ದರು. ಇವರು ಪರಿಶಿಷ್ಟ ಜಾತಿಗೆ ಸೇರಿದಂತಹ ಒಬ್ಬ ಸಜ್ಜನ ವ್ಯಕ್ತಿ. ಅಪಾರ ಅನುಭವ ಇದ್ದವರು. ಅವರೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೂ ಕೂಡ ಚಿರಶಾಂತಿ ದೊರಕಲಿ ಎಂದು ಆಶಿಸುತ್ತಾ ಇವತ್ತು ನೀವು ತಂದಿರುವಂತಹ ಸಂತಾಪ ಸೂಚನ ನಿರ್ಣಯವನ್ನು ಬೆಂಬಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ(ಕಡೂರು): ಮಾನ್ಯ ಅಧ್ಯಕ್ಷರೆ, ಸಂತಾಪ ಸೂಚನ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸದಸ್ಯರುಗಳಾದ ವೈ. ರಾಮಚಂದ್ರ ರವರು, ಎಂ.ಎಲ್ ಉಸ್ತಾದ್ ರವರು, ಬಳವಂತರಾವ್ ದೇವರಾವ್ ಪಾಟೀಲ್‌ರವರು, ಎಂ. ಬಸಪ್ಪನವರು, ಮಂಜಪ್ಪ ಉಳ್ಳಾಲ್‌ರವರು ಹಾಗೂ ಡಿ. ಹಲಗೇಗೌಡ ಇವರುಗಳು ಈ ಸದನದ ಸದಸ್ಯರಾಗಿ, ಸಚಿವರಾಗಿ ಹಲವಾರು ರೀತಿಯಲ್ಲಿ ಈ ರಾಜ್ಯಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ. ಹುಟ್ಟು ಆಕಸ್ಮಿಕ ಸಾವು ನಿಶ್ಚಯ. ಮಾನ್ಯ ರಾಮಚಂದ್ರರವರು ಬೆಂಗಳೂರು ನಗರದಲ್ಲಿ ಒಂದು ಒಳ್ಳೆಯ ಕುಟುಂಬದಲ್ಲಿ ಹುಟ್ಟಿ ಕಾನೂನು ಪದವಿಯನ್ನು ಮಾಡುವುದರ ಜೊತೆಗೆ ಅವರು ಜೀವನದಲ್ಲಿ ಸಕ್ರಿಯವಾಗಿ ರಾಜಕಾರಣವನ್ನು ಆರಿಸಿಕೊಂಡರು. ಅವರು ಚಿಕ್ಕಪೇಟೆಯಿಂದ ಕಾರ್ಪೊರೇಟರ್ ಆಗಿ, ಈ ಮಹಾನಗರ ಪಾಲಿಕೆಯ ಮೇಯರ್ ಆಗಿ, ಬೆಂಗಳೂರು ನಗರಕ್ಕೆ ತಿಪ್ಪಗೊಂಡನಹಳ್ಳಿಯಿಂದ ಕುಡಿಯುವ ನೀರನ್ನು ತರುವಂತಹ ಕೆಲಸವನ್ನು ಮಾಡಿ ಸರ್ ಎಂ. ವಿಶ್ವೇಶ್ವರಯ್ಯನವರ

ಪ್ರೀತಿಗೆ ಪಾತ್ರರಾಗಿದ್ದರು. ಇವರು ಹಲವಾರು ಕ್ಷೇತ್ರಗಳಲ್ಲಿ ಮಾಡಿದ ಸೇವೆಗಳು ಚಿರಸ್ಮರಣೀಯವಾದದ್ದು. ಅವರ ದಿಟ್ಟತನ ಮತ್ತು ಅವರು ತೆಗೆದುಕೊಂಡಂತಹ ತೀರ್ಮಾನಗಳು, ಅವರನ್ನು ರಾಜ್ಯ ವಿಧಾನ ಸಭೆಗೆ ಜನ ಆಯ್ಕೆ ಮಾಡಿದರು. ಇದಕ್ಕೂ ಮುಂಚೆ 1942ರಲ್ಲಿ ಗಾಂಧೀಜಿಯವರ ಸಿದ್ಧಾಂತಕ್ಕೆ ಒಳಗಾಗಿ "ಕ್ವಿಟ್ ಇಂಡಿಯಾ ಚಳುವಳಿ"ಯಲ್ಲಿ ಭಾಗವಹಿಸಿ, ಜೈಲು ವಾಸವನ್ನು ಸಹ ಅನುಭವಿಸಿದರೆಂಬ ವಿಚಾರವನ್ನು ನಾವು ಕೇಳಿದ್ದೇವೆ. ಅವರು ರಾಜಕೀಯವಾಗಿ ಹಿಂದುಳಿದ ವರ್ಗಗಳ ನಾಯಕರಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಏಳಿಗೆಗೆ ದುಡಿದಂತಹ ಹಲವಾರು ನಿದರ್ಶನಗಳು ಸಾಕಷ್ಟು ಇವೆ. ಅದೇ ರೀತಿಯಲ್ಲಿ ಶ್ರೀ ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಸಚಿವರಾಗಿ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡಿದರು. 1967ರಲ್ಲಿ ಜವಹರಲಾಲ್ ನೆಹರು ಭವನದ ಉಪಾಧ್ಯಕ್ಷರಾಗಿ, ಇವತ್ತು ಕಬ್ಬನ್‌ಪಾರ್ಕಿನ ಬಾಲಭವನದಲ್ಲಿ ಮಕ್ಕಳಿಗೆಂದು ಪುಟ್ಟಾಣಿ ರೈಲು ಏನು ಇದೆ, ಅದು ಅವರು ಮಾಡಿಕೊಟ್ಟ ಸಾಧನೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅದೇ ರೀತಿಯಲ್ಲಿ ಅವರು ಕಾಂಗ್ರೆಸ್ ಪಕ್ಷದ ಸದಸ್ಯರಾಗಿ, ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ನಾಯಕರಾಗಿದ್ದವರಿಗೆ ತಮ್ಮನ್ನು ಗುರುತು ಮಾಡಿಕೊಂಡಿದ್ದರು. ಇಂತಹ ವ್ಯಕ್ತಿ ಇವತ್ತು ಇಲ್ಲ, ಅದಕ್ಕೆ ಅವರಿಗೆ ಸಂತಾಪ ಸೂಚನೆಯನ್ನು ಹೇಳುತ್ತೇನೆ. ಇನ್ನು ಶ್ರೀ ಎಂ.ಬಸಪ್ಪನವರ ಬಗ್ಗೆ ಹೇಳುವುದಾದರೆ, ನಾವು ಮೊದಲನೆಯ ಬಾರಿ ವಿಧಾನ ಸಭೆಗೆ ಆಯ್ಕೆಯಾದಂತಹ ಸಂದರ್ಭದಲ್ಲಿ, ಅವರು ನಿವೃತ್ತ ಇಂಜಿನಿಯರ್ ಆಗಿ, ಅವರು ರಾಜಕೀಯ ರಂಗವನ್ನು ಪ್ರವೇಶ ಮಾಡಿ, 10ನೇ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ಅದೇ ರೀತಿಯಲ್ಲಿ ಶ್ರೀ ಎಂ.ಎಲ್.ಉಸ್ತಾದ್‌ರವರು ಕೂಡ ಮಾನ್ಯ ಎಸ್.ಬಂಗಾರಪ್ಪನವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದರು. ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರದಲ್ಲೂ ಶಾಸಕರಾಗಿ ಹಲವಾರು ಕ್ಷೇತ್ರಗಳಲ್ಲಿ ಕೆಲಸವನ್ನು ಮಾಡಿದರು. ನಾವು ಒಮ್ಮೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯಿಂದ ಪ್ರವಾಸ ಹೋದಂತಹ ಸಂದರ್ಭದಲ್ಲಿ, ಅವರು ಯಾವಾಗಲೂ ತನ್ನ ಸಹದ್ಯೋಗಿಗಳೊಂದಿಗೆ, ನಗುನಗುತ್ತಾ ತಮ್ಮ ಸುಖ ದು:ಖಗಳನ್ನು ಹಂಚಿಕೊಳ್ಳುವಂತಹ ಮಾತುಗಳನ್ನು ಅವರು ಆಡುತ್ತಿದ್ದರು. ಆದುದರಿಂದ ಇವತ್ತು ಏನು ನಿಧನ ಹೊಂದಿರುವವರಿಗೆ ಸಂತಾಪ ಸೂಚನೆಯನ್ನು ಹೇಳುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್(ಬೀದರ್): ಸನ್ಮಾನ್ಯ ಅಧ್ಯಕ್ಷರೆ, ತಾವು ಇಂದಿನ ಸಭೆಯಲ್ಲಿ ತಂದಿರುವ ಸಂತಾಪ ಸೂಚನೆಯನ್ನು ಸ್ವಾಗತ ಮಾಡುತ್ತಾ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಇಂದು ನಿಧನ ಹೊಂದಿರುವ ಶ್ರೀ ವೈ.ರಾಮಚಂದ್ರರವರು, ಶ್ರೀ ಎಂ.ಎಲ್.ಉಸ್ತಾದ್‌ರವರು, ಶ್ರೀ ಬಳವಂತರಾವ್ ದೇವರಾವ್ ಪಟೇಲ್‌ರವರು, ಶ್ರೀಎಂ.ಬಸಪ್ಪನವರು, ಶ್ರೀ ಮಂಜಪ್ಪ ಉಳ್ಳಾಲ್‌ರವರು, ಹಾಗೂ ಡಿ. ಹಲಗೇಗೌಡರವರು, ಇವರೆಲ್ಲರಿಗೂ ಶ್ರದ್ಧಾಂಜಲಿಯನ್ನು ಹೇಳುತ್ತೇನೆ. ಇದರಲ್ಲಿ ಶ್ರೀ ಬಳವಂತರಾವ್ ದೇವರಾವ್ ಪಟೇಲ್‌ರವರು ನಮ್ಮ ಬೀದರ್ ಜಿಲ್ಲೆಯವರಾಗಿದ್ದು, ಇವರು ಖಾನಪುರದ ಭಾಲ್ಕಿಯಲ್ಲಿ ಜನಿಸಿದರು. 1952ರಲ್ಲಿ ಪುರಸಭೆಯ ಸದಸ್ಯರಾಗಿದ್ದರು, ಹಾಗೂ 1957ರಲ್ಲಿ ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡು, ಈ ಕ್ಷೇತ್ರದಲ್ಲಿ ಬಹಳಷ್ಟು ಸಾಧನೆಯನ್ನು ಮಾಡಿ, ವಕೀಲರು ಆಗಿ ಇವರು ರಜಾಕ್‌ರ ಕಾಲದಲ್ಲಿ ಅವರದೇ ಆದಂತಹ ಒಂದು ವಿಶೇಷವಾದ ಹೋರಾಟದಲ್ಲಿ ಮೂಂಚೂಣಿಯಲ್ಲಿದ್ದರು. ನಮ್ಮ ಹೈದರಾಬಾದ್ ಕರ್ನಾಟಕ ಸ್ವತಂತ್ರ ಆಗಿ, ನಮಗೆ ಒಂದು ವರ್ಷದ ನಂತರ ಸ್ವಾತಂತ್ರ್ಯ ಸಿಕ್ಕಿತು. ಆಗ ನಿಜಾಮರ ಕೈಯಲ್ಲಿ ಆಡಳಿತವಿದ್ದಾಗ ರಜಾಕ್‌ರ ಜೊತೆಗೆ ಹೋರಾಟ ಮಾಡಿದವರಲ್ಲಿ ಇವರು ಒಬ್ಬರಾಗಿದ್ದರು. ಹಾಗಾಗಿ ಇಂತಹ ಒಬ್ಬ ಮಹಾತ್ಮ ವ್ಯಕ್ತಿ ಬೀದರ್ ಜಿಲ್ಲೆಯಲ್ಲಿ ನ್ಯಾಯವಾದಿಗಳಾಗಿ, ಮತ್ತೆ ನ್ಯಾಯಾಧೀಶರಾಗಿ, ಅವರು ಸೇವೆಯನ್ನು ಸಲ್ಲಿಸಿ, ಅಪಾರವಾದಂತಹ ಗೌರವವನ್ನು ಹೊಂದಿದ್ದಂತಹ ವ್ಯಕ್ತಿಯಾಗಿದ್ದರು. ಅಂತಹ ವ್ಯಕ್ತಿಗೆ ನನ್ನ ಪರವಾಗಿ ಅವರ ಆತ್ಮಕ್ಕೆ ದೇವರು ಶಾಂತಿಯನ್ನು ನೀಡಲಿ ಎಂದು ಹೇಳುತ್ತಾ, ಅವರ ಕುಟುಂಬ ವರ್ಗಕ್ಕೆ ದು:ಖವನ್ನು ಭರಿಸುವ ಆ ಒಂದು ಶಕ್ತಿಯನ್ನು ಕೊಡಲಿ ಎಂದು ನಾನು ಈ ಸಭೆಯ ಮೂಖಾಂತರ ಕೋರುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಔರಾದ್): ಸನ್ಮಾನ್ಯ ಆಧ್ಯಕ್ಷರೆ, ತಾವು ಇಂದು ತಂದಿರುವ ಸಂತಾಪ ಸೂಚನೆಯನ್ನು ಅನುಮೋದಿಸುತ್ತೇನೆ. ಇಂದು ನಿಧನ ಹೊಂದಿರುವಂತಹ ಮಾಜಿ ಸಚಿವರಾಗಿದ್ದ ಶ್ರೀ ವೈ. ರಾಮಚಂದ್ರರವರು, ಹಾಗೂ ಶ್ರೀ ಎಂ.ಎಲ್.ಉಸ್ತಾದ್‌ರವರು, ಶ್ರೀ ಬಳವಂತರಾವ್ ದೇವರಾವ್ ಪಟೇಲ್‌ರವರು, ಇವರು ನಮ್ಮ ಔರಾದ್ ತಾಲ್ಲೂಕಿನವರು, ಬಹಳ ಒಳ್ಳೆಯವರು, ಅನುಭವಿಗಳು, ಇವರು ರಜಾಕ್‌ರವರ ಕಾಲದಲ್ಲೂ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಇವರು ಒಮ್ಮೆ ಮುನ್ಸಿಫ್‌ರು ಆಗಿದ್ದರು. ಇವರು ಸಾಮಾಜಿಕ ಕೆಲಸಗಳನ್ನು ಬಹಳ ಮಾಡಿದ್ದಾರೆ. ಇವರು ಒಳ್ಳೆಯ

ಕೆಲಸಗಾರರರು ಆಗಿದ್ದರು, ಮತ್ತು ಒಳ್ಳೆಯವರು ಆಗಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅವರ ಕುಟುಂಬ ವರ್ಗದವರಿಗೂ ಶಾಂತಿ ಸಿಗಲಿಯೆಂಬ ಮಾತನ್ನು ಹೇಳುತ್ತೇನೆ. ಇನ್ನು ಶ್ರೀ ಎಂ.ಬಸಪ್ಪನವರು, ಶ್ರೀ ಮಂಜಪ್ಪ ಉಳ್ಳಾಲ್‌ರವರು ಹಾಗೂ ಶ್ರೀ ಡಿ.ಹಲಗೇಗೌಡರು, ಶ್ರೀ ಹಲಗೇಗೌಡರು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಇದ್ದರು, ನಾನು ಕೂಡ ಅವರೊಂದಿಗೆ ಇದ್ದೆ, ನಾನು ಅವರೊಂದಿಗೆ ಡೈರಕ್ಟರ್ ಆಗಿ ಕೂಡ ಇದ್ದೆ. ಅವರು ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅವರು ಎರಡು ಬಾರಿ ವಿಧಾನ ಸಭೆಗೂ ಬಂದಿದ್ದಾರೆ. ಇವರು ಬಹಳ ಒಳ್ಳೆಯವರು, ಅನುಭವಿಗಳು, ಮತ್ತೆ ಬಹಳ ಸಾತ್ವಿಕರು ಆಗಿದ್ದರು. ಇವರ ಆತ್ಮಕ್ಕೂ ಶಾಂತಿ ಸಿಗಲಿಯೆಂದು ಹೇಳುತ್ತಾ, ನನಗೆ ಮಾತನಾಡಲು ಅನುಮತಿ ನೀಡಿದ್ದಕ್ಕಾಗಿ ತಮಗೆ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಟಿ.ಪರಮೇಶ್ವರ ನಾಯಕ(ಹರಪನಹಳ್ಳಿ): ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡನೆ ಮಾಡಿರುವಂತಹ ಸಂತಾಪ ಸೂಚನೆಯಲ್ಲಿ, ಹರಪನಹಳ್ಳಿ ವಿಧಾನಸಭಾ ಕ್ಷೇತ್ರವನ್ನು 1972ರಲ್ಲಿ, 1978 ಹಾಗೂ 1994ರಲ್ಲಿ ಆಯ್ಕೆಯಾಗಿದ್ದಂತಹ ಶ್ರೀ ಡಿ.ನಾರಾಯಣ ದಾಸ್‌ರವರು, ಇವರು ಮಂತ್ರಿಗಳಾಗಿ ಕೂಡ ಕೆಲಸವನ್ನು ಮಾಡಿದ್ದರು. ಅವರ ಹೆಸರನ್ನು ಇಂದಿನ ಸಂತಾಪ ಸೂಚನೆಯಲ್ಲಿ ಕೈ ಬಿಟ್ಟಿದ್ದೀರಿ. ಇವರು ಒಮ್ಮೆ ಎಂ.ಎಲ್.ಸಿ.ಯಾಗಿ ಕೂಡ ಕೆಲಸವನ್ನು ಮಾಡಿದ್ದಾರೆ. ಇವರ ಹೆಸರನ್ನು ಸಂತಾಪ ಸೂಚನೆಯಲ್ಲಿ ಪ್ರಸ್ತಾಪ ಮಾಡಿಲ್ಲ. ಇದನ್ನು ತಾವು ಪ್ರತ್ಯೇಕವಾಗಿ ಪ್ರಸ್ತಾಪ ಮಾಡುತ್ತಿರೋ, ಅಥವಾ ಇದರಲ್ಲೆ ಸೇರಿಸುವುದಕ್ಕೆ ಅನುಮತಿಯನ್ನು ಕೊಡುತ್ತಿರೋ, ಎಂಬುದು ಹೇಳಬೇಕು.

ಅಧ್ಯಕ್ಷರು: ಇವರ ಹೆಸರನ್ನು ಇಂದಿನ ಪಟ್ಟಿಯಲ್ಲೆ ಸೇರಿಸಿ ಮಾಡಿಯೆಂದು ಹೇಳಿದ್ದಾರಲ್ಲಾ ನೀವು ಮಾತನಾಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈ ವಿಷಯನ್ನು ಮಾನ್ಯ ಜಿ.ವಿ. ಶ್ರೀರಾಮರೆಡ್ಡಿರವರು ಗಮನ ಸೆಳೆದ ತಕ್ಷಣವೇ ಇದು ಲೋಪವಾಗಿದೆಯೆಂದು, ಅದನ್ನು ಸೇರಿಸುತ್ತೇವೆಂದು ಹೇಳಿದ್ದಾರೆ. ಆದುದರಿಂದ ತಾವು ಸಂತಾಪವನ್ನು ವ್ಯಕ್ತಪಡಿಸಬಹುದು.

ಶ್ರೀ ಪಿ.ಟಿ.ಪರಮೇಶ್ವರ ನಾಯಕ: ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಡಿ.ನಾರಾಯಣದಾಸ್‌ರವರು ಹಿಂದುಳಿದ ವರ್ಗದ ಒಬ್ಬ ಮೇರು ನಾಯಕತ್ವವನ್ನು ಹೊಂದಿರುವಂತಹ ಹಾಗೂ ತುಳಿತಕ್ಕೆ ಒಳಗಾಗಿರುವಂತಹ ಸಮಾಜಕ್ಕೆ ಧ್ವನಿಯನ್ನು ನೀಡಿರುವಂತಹವರು ಅವರು ಕಳೆದ ಒಂದೂವರೆ ತಿಂಗಳ ಕೆಳಗೆ ರಸ್ತೆ ಅಪಘಾತದಲ್ಲಿ ಸಾವನ್ನು ಅಪ್ಪಿರುವಂತಹ ವಿಚಾರವನ್ನು ಇವತ್ತಿನ ಸಂತಾಪ ಸೂಚನೆಯ ಪಟ್ಟಿಯಲ್ಲಿ ಸೇರಿಸುತ್ತೇವೆಂಬ ಮಾತನ್ನು ಹೇಳಿದ್ದೀರಿ. ಇವರು ಸಹ ಹರಪನಹಳ್ಳಿಯ ಮೀಸಲು ಕ್ಷೇತ್ರಕ್ಕೆ ತಮ್ಮದೇ ಆದಂತಹ ಅಪಾರವಾದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ. ಇವರು ಮೂರು ಬಾರಿ ವಿಧಾನ ಸಭಾ ಸದಸ್ಯರಾಗಿ ಒಮ್ಮೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿ, ಇವತ್ತು ನಮ್ಮನ್ನು ಅಗಲಿರುವುದರಿಂದ ನಮ್ಮ ತಾಲ್ಲೂಕಿಗೆ ಸಾಕಷ್ಟು ನೋವು ಆಗಿದೆಯೆಂಬ ಮಾತನ್ನು ಹೇಳಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅದೇ ರೀತಿಯಲ್ಲಿ ತಾವು ಮಂಡನೆ ಮಾಡಿರುವಂತಹ ಶ್ರೀ ವೈ.ರಾಮಚಂದ್ರರವರು, ಶ್ರೀ ಎಂ.ಎಲ್.ಉಸ್ತಾದ್‌ರವರು, ಶ್ರೀ ಬಳವಂತರಾವ್ ದೇವರಾವ್ ಪಟೇಲ್‌ರವರು, ಶ್ರೀ ಎಂ.ಬಸಪ್ಪನವರು, ಶ್ರೀ ಮಂಜಪ್ಪ ಉಳ್ಳಾಲ್‌ರವರು, ಶ್ರೀ ಡಿ.ಹಲಗೇಗೌಡರು, ಇವರೆಲ್ಲರಿಗೂ ಸಂತಾಪವನ್ನು ಸೂಚಿಸುತ್ತೇನೆ. ತಾವು ಮಂಡನೆ ಮಾಡಿರುವ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುವಾಗ ಹರಪನಹಳ್ಳಿ ಶಾಸಕರು ಎಂದು ಪ್ರಸ್ತಾಪ ಮಾಡಿದರು. ಅವರು ಮಾಜಿ ಶಾಸಕರು ಹಾಗೂ ಸಚಿವರಾಗಿ ಇದ್ದವರು ಎಂದು ತಮ್ಮ ಗಮನಕ್ಕೆ ತರುತ್ತೇನೆ. ಇಷ್ಟು ಹೇಳಿ ನಮ್ಮ ಮಾತನ್ನು ಮುಗಿಸುತ್ತೇನೆ.

ಶ್ರೀ ವೈಜನಾಥ ಪಾಟೀಲ್(ಚಿಂಚೋಳಿ): ಮಾನ್ಯ ಸಭಾಧ್ಯಕ್ಷರೇ, ತಾವು ತಂದಿರುವ ಸಂತಾಪ ಸೂಚನೆಯಲ್ಲಿ ವೈ.ರಾಮಚಂದ್ರ, ಎಂ.ಎಲ್.ಉಸ್ತಾದ್, ಬಳವಂತರಾವ್ ದೇವರಾವ್ ಪಟೇಲ್, ಎಂ. ಬಸಪ್ಪ, ನಾರಾಯಣದಾಸ್, ಮಂಜಪ್ಪ ಉಳ್ಳಾಲ್, ಡಿ.ಹಲಗೇಗೌಡ ಇವರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ. ಅದನ್ನು ನಾನು ಸಮರ್ಥಿಸುತ್ತಾ, ಬಳವಂತರಾವ್ ಖಾನಾಪುರ್‌ಕರ್ ಅವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಅವರು ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನವರು. ಅವರು ಭಾಲ್ಕಿಯಿಂದ ಆರಿಸಿ ಬಂದಿದ್ದರು ಎಂದು ಸಂತಾಪ ಸೂಚನಾ ನಿರ್ಣಯದಲ್ಲಿ ತೋರಿಸಿದ್ದೀರಿ. ಆದರೆ ಅವರು ಭಾಲ್ಕಿಯಿಂದಲ್ಲ, ಔರಾದ್‌ನಿಂದಲೇ ಆರಿಸಿ

ಬಂದಿದ್ದರು. ಆ ಕಾಲಕ್ಕೆ ಅದು ಔರಾದ್ ಮತ್ತು ಭಾಲ್ಕಿ ಎಂದು double member constituency ಆಗಿತ್ತು. ಅದನ್ನು ಸರಿ ಮಾಡಬೇಕು. ಅವರ ಬಗ್ಗೆ ಹೇಳುವುದಾದರೆ, ಅವರು ಒಳ್ಳೆಯ ವಕೀಲರು. ಅವರು ಮೊದಲು ವಕಾಲತ್ತು ಮಾಡಿಕೊಂಡಿದ್ದರು. ಆನಂತರ, ನಾನು Bidar Bar Associationಗೆ ಸೇರಿದಾಗ ಬಹಳಷ್ಟು ಸಲ ನಾನಷ್ಟೇ ಅಲ್ಲ, ಎಷ್ಟೋ ಜೂನಿಯರ್‌ಗಳು ಅವರ ಸಲಹೆಗಳನ್ನು ಪಡೆಯುತಿದ್ದರು. ಅವರು ಒಳ್ಳೆಯ ಸಜ್ಜನರು, ಬಹಳ ಪ್ರಾಮಾಣಿಕರು. ಅವರು ಸ್ವತಂತ್ರವಾಗಿ ಆರಿಸಿ ಬಂದಿದ್ದರು. ಇನ್ನು, ನಾರಾಯಣದಾಸ್‌ರವರ ಬಗ್ಗೆ ಹೇಳಬೇಕಾದರೆ, ಅವರು 1994ರಲ್ಲಿ ಎಂ.ಎಲ್.ಸಿ. ಚುನಾವಣೆಗೆ ನಿಂತಿದ್ದರು. ಆಗ ಅದು ಬಳ್ಳಾರಿ ಜಿಲ್ಲೆಯಲ್ಲಿತ್ತು. ಅವರು ಒಳ್ಳೆಯ ಕಾರ್ಯಕರ್ತರು. ಅವರು ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವುದನ್ನು ನೋಡುವ ಅವಕಾಶ ನನಗೆ ಸಿಕ್ಕಿತ್ತು. ಮೊದಲಿಗೆ, ತಾವು ಅವರ ಬಗ್ಗೆ ಸಂತಾಪ ಸೂಚನಾ ನಿರ್ಣಯದಲ್ಲಿ ಸೇರಿಸುವುದನ್ನು ಮರೆತರೂ ಕೂಡ, ನಂತರ ಸೇರಿಸುವುದಾಗಿ ಹೇಳಿದ್ದೀರಿ. ಅದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಿ, ತಾವು ತಂದಿರುವ ಸಂತಾಪ ಸೂಚನಾ ನಿರ್ಣಯವನ್ನು ಸಮರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಡಿ.ನಾರಾಯಣದಾಸ್‌ರವರು ಈ ಸದನದ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರು. ಅವರು 01–07–1939ರಲ್ಲಿ ಬಳ್ಳಾರಿ ಜಿಲ್ಲೆಯ ಕಮಲಾಪುರದಲ್ಲಿ ಜನಿಸಿದ್ದು, ಅವರು ಬಿ.ಎ. ಪದವೀಧರರಾಗಿದ್ದರು. ಶ್ರೀಯುತರು ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಜನತಾ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು 5, 6 ಮತ್ತು 10ನೇ ವಿಧಾನಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೇ, 1989ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ದಿನಾಂಕ 29–12–2006ರಂದು ಅಪಘಾತದಿಂದ ನಿಧನ ಹೊಂದಿರುವುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸಬಯಸುತ್ತೇನೆ.

ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರು: ಈಗ ಪ್ರಶ್ನೋತ್ತರಗಳು.

2. ನೂತನ ಸಚಿವರ ಪರಿಚಯ

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು, ಸಂಸದೀಯ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು, ನೂತನವಾಗಿ ಸಚಿವರಾದಂಥ ಸನ್ಮಾನ್ಯ ಆಲಂಗೂರು ಶ್ರೀನಿವಾಸ್‌ರವರು, ಸನ್ಮಾನ್ಯ ಜಿ.ಟಿ.ದೇವೇಗೌಡರವರು ಹಾಗೂ ಸನ್ಮಾನ್ಯ ಮಹದೇವ ಪ್ರಸಾದ್‌ರವರು ನೂತನವಾಗಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿ ಸದನಕ್ಕೆ ಬಂದಿದ್ದಾರೆ. ಅವರ ಪರಿಚಯವನ್ನು ಸದನಕ್ಕೆ ಮಾಡಿಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಕೇಳುತ್ತಿದ್ದೇನೆ, ಮಹಿಳೆಯರಿಗೆ ಏಕೆ ಸಚಿವ ಸ್ಥಾನವನ್ನು ಕೊಡಲಿಲ್ಲ ಎಂದು ನಾನು ಕೇಳುತ್ತಿದ್ದೇನೆ. ಮಹಿಳೆಯರ ಪರವಾಗಿ ಮಾತನಾಡತಕ್ಕಂಥ ಈ ಸರ್ಕಾರ, ಒಬ್ಬ ಮಹಿಳೆಯನ್ನಾದರೂ ಮಂತ್ರಿಯನ್ನಾಗಿ ಮಾಡಿದ್ದರೆ, ಅದು ನಿಜಕ್ಕೂ ಆದರ್ಶವಾಗುತ್ತಿತ್ತು, ಆಗ ಮಹಿಳಾ ಕುಲಕ್ಕೆ ಒಂದು ಒಳ್ಳೆಯ ಗಂಭೀರ ಇರುತ್ತಿತ್ತು. ಆದರೆ ತಾವು ಮಹಿಳೆಯರನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದೀರಿ. ತಮ್ಮ ಪಕ್ಷಕ್ಕೆ ಮಹಿಳೆಯರ ಗುರುತನ್ನೇ ಇಟ್ಟುಕೊಂಡಿರತಕ್ಕಂಥವರು ತಾವು.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೇ ಈಗ ಪ್ರಶ್ನೋತ್ತರಕ್ಕೆ ಹೋಗೋಣ. ಸದನ ಪ್ರಾರಂಭವಾಗಿ ಈಗಾಗಲೇ ಒಂದು ಗಂಟೆಯಾಯಿತು.

ಶ್ರೀ ವಾಟಾಳ್ ನಾಗರಾಜ್: ಒಬ್ಬ ಮಹಿಳೆಗೂ ನೀವು ಅವಕಾಶ ಕೊಟ್ಟಿಲ್ಲ. ಈ ರಾಜ್ಯದ ಮಹಿಳೆಯರು ಬೇಡವೇ? ಇದರಿಂದ ಮನಸ್ಸಿಗೆ ನೋವಾಗುತ್ತದೆ. ಮಾನ್ಯ ಪ್ರಕಾಶ್‌ರವರೇ ಇದಕ್ಕೆ ತಾವು ಉತ್ತರವನ್ನು ಹೇಳಬೇಕು. ಏಕೆ ಮಹಿಳೆಯರನ್ನು ತೆಗೆದುಕೊಳ್ಳಲಿಲ್ಲ? ಮಹಿಳೆಯರಿಗೆ ಏಕೆ ಅವಕಾಶ ಕೊಡಲಿಲ್ಲ? ಅದಕ್ಕೆ ಕಾರಣವೇನು? ಎನ್ನುವುದನ್ನು ನೀವು ಹೇಳಬೇಕು.

ಅಧ್ಯಕ್ಷರು: ಆಯಿತು, ಕುಳಿತುಕೊಳ್ಳಿ. ನೀವು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಈಗ ಪ್ರಶ್ನೋತ್ತರ.